ಕನ್ನಡ ಅಭಿವೃದ್ಧಿ ಪ್ರಾಧಿಕಾರ
ವಿಧಾನಸೌಧ, ಬೆಂಗಳೂರು

# ಡಾ. ಸರೋಜಿನಿ ಮಹಿಷಿ ವರದಿಯ
# ಪರಿಷ್ಕೃತ ವರದಿ

## ಭಾಗ – ೩

### ವರದಿಯ ವರ್ಗೀಕರಣ ವಿಭಾಗ

### ೨೦೧೭

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

# ಡಾ. ಸರೋಜಿನಿ ಮಹಿಷಿ ವರದಿಯ ಪುನರ್ ಪರಿಶೀಲನಾ ಸಮಿತಿಯು ಸಲ್ಲಿಸಿರುವ ಶಿಫಾರಸು

# ಪರಿಷ್ಕೃತ ವರದಿ

## ಪೀಠಿಕೆ

### ಡಾ. ಸರೋಜಿನಿ ಮಹಿಷಿ ವರದಿ

ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಅನ್ನುವುದು ತೀರಾ ಸಹಜವಾದ ವಿಚಾರ. ಇಂದು ಇದು ವಿಶ್ವದಾದ್ಯಂತ ಕೇಳಿ ಬರುತ್ತಿರುವ ಕೂಗು. ಆದರೆ, ಅದು ಇಂದಿಗೂ ಹಲವು ರಾಜ್ಯಗಳಲ್ಲಿ ಆದರ್ಶವಾಗಿಯೇ ಉಳಿದಿದೆ. ಕರ್ನಾಟಕದಲ್ಲಿ ಸಾಕಷ್ಟು ಕೇಂದ್ರೋದ್ಯಮ, ಸಾರ್ವಜನಿಕ, ಖಾಸಗಿ ಉದ್ಯಮಗಳಿದ್ದರೂ ಕನ್ನಡಿಗರಿಗೆ ಸೂಕ್ತ ಪ್ರಮಾಣದಲ್ಲಿ ಉದ್ಯೋಗಾವಕಾಶಗಳು ದೊರೆತಿರಲಿಲ್ಲ. ಇದು ಸ್ವಾತಂತ್ರ್ಯಪೂರ್ವ ದಿಂದಲೂ ಇದ್ದ ಸ್ಥಿತಿ. ಕರ್ನಾಟಕ ಏಕೀಕರಣದ ನಂತರವೂ ಇದೆ ಪರಿಸ್ಥಿತಿ ಮುಂದುವರಿದಾಗ ಸ್ಥಳೀಯ ಕನ್ನಡಿಗರಲ್ಲಿ ಹತಾಶ ಭಾವನೆ ಮೂಡಿತ್ತು. ಇದನ್ನು ಗಮನಿಸಿ ರಾಜ್ಯ ಸರ್ಕಾರ ಕನ್ನಡಿಗರಿಗೆ ಉದ್ಯೋಗದಲ್ಲಿ ಸೂಕ್ತ ಅವಕಾಶ ಸಿಗುವಂತೆ ಮಾಡಲು ೧೯೮೧ರಿಂದ ಪ್ರಯತ್ನ ನಡೆಸಿದೆ. ಅದರಲ್ಲೂ ಅತೀ ಮಹತ್ವದ್ದು ಡಾ. ಸರೋಜಿನಿ ಮಹಿಷಿ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದ್ದು.

### ಮಹಿಷಿ ವರದಿ ಪರಿಷ್ಕರಣದ ಅಗತ್ಯತೆ

ರಾಜ್ಯದಲ್ಲಿ ಕನ್ನಡಿಗರ ಉದ್ಯೋಗ ಸಮಸ್ಯೆಯ ಸ್ವರೂಪ ಮತ್ತು ಪರಿಹಾರ ಮಾರ್ಗಗಳನ್ನು ಸೂಚಿಸಲು ಅಧ್ಯಯನ ನಡೆಸಿ, ದಾಖಲೆಗಳನ್ನು ಪರಿಶೀಲಿಸಿ ಕಾರ್ಯಸಾಧುವಾದ ವರದಿ ಸಲ್ಲಿಸಲು ಸಂಸದೆ ಡಾ. ಸರೋಜಿನಿ ಮಹಿಷಿ ಅವರ ಅಧ್ಯಕ್ಷತೆಯಲ್ಲಿ ೨೫.೧.೧೯೮೩ರಂದು ಸಮಿತಿಯನ್ನು ರಚಿಸಿತು. ಸಮಿತಿಯು ಹಲವು ಉದ್ಯಮ, ಬ್ಯಾಂಕ್‌ಗಳಿಗೆ ಭೇಟಿ ನೀಡಿ, ಬೇರೆ

ರಾಜ್ಯಗಳಿಂದ ಅಗತ್ಯ ಮಾಹಿತಿಯನ್ನು ತರಿಸಿಕೊಂಡು ಎಲ್ಲವನ್ನು ಗಮನಿಸಿ ೩೦.೧೨.೧೯೮೬ರಂದು ವರದಿ ಸಲ್ಲಿಸಿತು. ಈ ವರದಿಯನ್ನು ಗಮನಿಸಿ ಇದೇ ಮಾದರಿಯಲ್ಲಿ ಕೆಲವು ರಾಜ್ಯಗಳು ಕಾನೂನು ರಚಿಸಿವೆ ಎಂದರೆ ಮಹಿಷಿ ವರದಿಯ ಮಹತ್ವ ತಿಳಿಯುತ್ತದೆ.

ಈ ಸಮಿತಿಯು ವರದಿ ನೀಡಿದಾಗ ಸರ್ಕಾರಿ ವಲಯದಲ್ಲೇ ಹೆಚ್ಚು ಹೆಚ್ಚು ಉದ್ಯೋಗಗಳು ಸೃಷ್ಟಿ ಆಗುತ್ತಿದ್ದವು. ಈಗ ಜಾಗತೀಕರಣದ ಪರಿಣಾಮವಾಗಿ ಸರ್ಕಾರಿ ಉದ್ದಿಮೆಗಳು ಹಿನ್ನೆಲೆಗೆ ಸರಿಯುತ್ತಿವೆ. ಐ.ಟಿ, ಬಿ.ಟಿ, ಬಹುರಾಷ್ಟ್ರೀಯ ಕಂಪನಿಗಳು, ಖಾಸಗಿ ಬ್ಯಾಂಕ್‌ಗಳು ಇತ್ಯಾದಿ ಖಾಸಗಿ ವಲಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಮಹಿಷಿ ವರದಿ ಸಿದ್ಧಪಡಿಸಿದಾಗ ಈ ಉದ್ಯಮಗಳು ಇರಲಿಲ್ಲ. ಹಾಗಾಗಿ ಇವುಗಳ ಪ್ರಸ್ತಾಪ ವರದಿಯಲ್ಲಿ ಇಲ್ಲ. ಅಲ್ಲದೆ ರಾಜ್ಯದಲ್ಲಿ ಆಗ ಹೆಚ್ಚು ಕೇಂದ್ರ ಕಚೇರಿಗಳೂ ಇರಲಿಲ್ಲ. ಸಹಜವಾಗಿ ವರದಿಯಲ್ಲಿ ಇವೂ ಕಾಣಿಸಿಕೊಂಡಿಲ್ಲ. ಈ ಮೂರು ದಶಕಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇದನ್ನು ಮನಗಂಡು, ಕನ್ನಡ ಅಭಿವೃದ್ಧಿ ಪ್ರಾಧಿಕಾರ 'ಡಾ. ಸರೋಜಿನಿ ಮಹಿಷಿ ವರದಿಯನ್ನು ಪುನರ್ ಪರಿಶೀಲಿಸಲು ಸಮಿತಿ'ಯನ್ನು ರಚಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಅದರಂತೆ ಸರ್ಕಾರ ಸಮಿತಿಯನ್ನು ರಚಿಸಿದೆ.

## ಪುನರ್ ಪರಿಶೀಲನಾ ಸಮಿತಿ

'ಸರ್ಕಾರಿ ಆದೇಶ ಸಂಖ್ಯೆ: ಕಸಂವಾ / ೨ ಕೆಬಿಎಲ್ ೨೦೧೬, ದಿನಾಂಕ: ೧೩.೬.೨೦೧೬' ಮೂಲಕ ಕೇಂದ್ರ ಹಾಗು ಖಾಸಗಿ ಸ್ವಾಮ್ಯದ ಉದ್ದಿಮೆ / ಸಂಸ್ಥೆ / ಕೈಗಾರಿಕೆ / ಕಚೇರಿಗಳ ಹಾಗು ಐಟಿ, ಬಿಟಿ ಸಂಸ್ಥೆಗಳನ್ನು ವರದಿಯ ಅಡಿಯಲ್ಲಿ ತರುವ ಅವಶ್ಯಕತೆಯಿರುವ ಹಿನ್ನೆಲೆಯಲ್ಲಿ ಈಗಿನ ಕಾಲಘಟ್ಟಕ್ಕೆ ತಕ್ಕಂತೆ ಡಾ. ಸರೋಜಿನಿ ಮಹಿಷಿ ವರದಿಯನ್ನು ಪುನರ್ ಪರಾಮರ್ಶಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿ ಆದೇಶಿಸಿದೆ,

* **ಅಧ್ಯಕ್ಷರು,** ಕನ್ನಡ ಅಭಿವೃದ್ಧಿ ಪ್ರಾಧಿಕಾರ – ಅಧ್ಯಕ್ಷರು
* ಶ್ರೀ ಗೊ.ರು. ಚನ್ನಬಸಪ್ಪ – ಸದಸ್ಯರು
* ಡಾ.ಬಿ.ಎಲ್. ಶಂಕರ್ – ಸದಸ್ಯರು
* ಶ್ರೀಮತಿ ಹೇಮಲತಾ ಮಹಿಷಿ – ಸದಸ್ಯರು



* ಶ್ರೀ ರಾ.ನಂ. ಚಂದ್ರಶೇಖರ್ – ಸದಸ್ಯರು
* ಡಾ.ಕೆ. ಮುರಳಿಧರ – ಸದಸ್ಯ ಕಾರ್ಯದರ್ಶಿ

## ಮಹಿಷಿ ವರದಿ ಮಹತ್ವ

ಡಾ. ಸರೋಜಿನಿ ಮಹಿಷಿ ವರದಿಯು 'ಸ್ಥಳೀಯರಿಗೆ ಉದ್ಯೋಗ' ಎಂಬುದಕ್ಕೆ ತಾತ್ವಿಕ ನೆಲೆಯನ್ನು ಒದಗಿಸಿದ ರಾಷ್ಟ್ರದ ಪ್ರಮುಖ ದಾಖಲೆಗಳಲ್ಲಿ ಒಂದು. ಹಾಗೇ ಸ್ಥಳೀಯರು ಎಂದರೆ ಯಾರು ಎಂಬುದಕ್ಕೆ ಖಚಿತ ಮಾಪನವನ್ನು ಅಳವಡಿಸಿದ್ದು ರಾಷ್ಟ್ರದ ಗಮನಸೆಳೆಯಿತು. ಮಹಿಷಿ ವರದಿಯು ಸೂಚಿಸಿರುವ ಸ್ಥಳೀಯರು (ಅಂದರೆ ೧೫ ವರ್ಷ ನಿವಾಸಿ) ಮಾನದಂಡವನ್ನು ಹಲವು ರಾಜ್ಯಗಳು ಅಳವಡಿಸಿಕೊಂಡಿವೆ. ೫೮ ಅಂಶಗಳ ಈ ವರದಿಯು ಕೇವಲ ಕನ್ನಡಿಗರ ಉದ್ಯೋಗ ವಿಚಾರಕ್ಕೆ ಸೀಮಿತವಾಗಿಲ್ಲ. ರೈತರು ನೀರಾವರಿ ಜಮೀನನ್ನು ಪರಪ್ರಾಂತದವರಿಗೆ ಪರಭಾರೆ ಮಾಡುವುದನ್ನು ನಿರ್ಬಂಧಿಸುವುದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ನಗರಾಭಿವೃದ್ಧಿ ಮಂಡಳಿಗಳು ನಿರ್ಮಿಸುವ ನಿವೇಶನ, ಮನೆಗಳನ್ನು ಅನ್ಯಪ್ರಾಂತೀಯರು ಪಡೆಯುವುದನ್ನು ತಡೆಯುವುದು, ರೈಲ್ವೆ ಪ್ರತ್ಯೇಕ ವಲಯ, ವೃತ್ತಿಪರ ಶಿಕ್ಷಣ ಕೋರ್ಸ್‌ಗಳನ್ನು ಹೆಚ್ಚು ಉಪಯುಕ್ತವಾಗಿಸುವುದೂ ಸೇರಿದಂತೆ ಹಲವು ಮಹತ್ವದ ಅಂಶಗಳು ವರದಿಯಲ್ಲಿವೆ.

## ಮಹಿಷಿ ವರದಿಯ ಸಂಕೀರ್ಣತೆ

ಮೇಲ್ನೋಟಕ್ಕೆ ಮಹಿಷಿ ವರದಿಯನ್ನು ರಾಜ್ಯ ಸರ್ಕಾರ ಅನುಷ್ಠಾನಗೊಳಿಸಬಹುದು ಅನ್ನುವ ಅಭಿಪ್ರಾಯಮೂಡುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ವರದಿ ಜಾರಿಗೆ ಬರಬೇಕಾದರೆ ಕೇಂದ್ರ ಸರ್ಕಾರ ಮನಸ್ಸು ಮಾಡಬೇಕು. ಈ ವರದಿಯು ಕೇಂದ್ರ ಸರ್ಕಾರವು ಒಪ್ಪದಿರುವ 'ರಾಷ್ಟ್ರೀಯ ಐಕ್ಯತಾ ಪರಿಷತ್ತಿನ ಉಪಸಮಿತಿಯು ೧೯೬೮ರಲ್ಲಿ ನೀಡಿದ ವರದಿಯನ್ನು ಆಧಾರವಾಗಿಟ್ಟುಕೊಂಡಿದೆ. ಅದನ್ನು ಮಹಿಷಿ ವರದಿ ಆರಂಭದಲ್ಲೇ ಹೀಗೆ ದಾಖಲಿಸಿದೆ : **'ಅರ್ಹತೆಯುಳ್ಳ ಸ್ಥಳೀಯ ಅಭ್ಯರ್ಥಿಗಳು ಲಭ್ಯವಿರುವಾಗ ಉದ್ಯೋಗಾವಕಾಶದಲ್ಲಿ ಅವರಿಗೆ ಹೆಚ್ಚಿನ ಭಾಗ ದೊರಕಿಸುವಂತೆ ಮಾಡಿರುವುದು. ಈ ಶಿಫಾರಸ್ಸನ್ನು ರಾಷ್ಟ್ರೀಯ ಐಕ್ಯತಾ ಪರಿಷತ್ತು ೨೨, ಜೂನ್ ೧೯೬೮ರಂದು ನಡೆದ ಸಭೆಯಲ್ಲಿ ಅಂಗೀಕರಿಸಿತ್ತು. ಈ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರವು ಯಾವ ಕ್ರಮವನ್ನೂ**

**ತೆಗೆದುಕೊಂಡಂತೆ ಕಾಣುವುದಿಲ್ಲ. ಡಾ. ಸರೋಜಿನಿ ಮಹಿಷಿ ಸಮಿತಿಯು ಮಾಡುವ ಶಿಫಾರಸ್ಸುಗಳು, ಪರಿಷತ್ತಿನ ಶಿಫಾರಸ್ಸಿಗೆ ಅನುಗುಣವಾಗಿರುವುವು. ಆದುದರಿಂದ ಡಾ. ಸರೋಜಿನಿ ಮಹಿಷಿ ಸಮಿತಿಯ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದರ ಮೂಲಕ ರಾಷ್ಟ್ರೀಯ ಐಕ್ಯತಾ ಪರಿಷತ್ತಿನ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರುವಂತೆ ರಾಜ್ಯ ಸರ್ಕಾರವು ನೋಡಿಕೊಳ್ಳಬೇಕು ಹಾಗು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಬೇಕು'** *(ಪು.೧೩)*

ಮಹಿಷಿ ವರದಿಯಲ್ಲಿರುವ ಇನ್ನೊಂದು ದಾಖಲೆ ೧೯೮೪ರ 'ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್'ನ ಮಾರ್ಗಸೂಚಿ. ಈ ಆದೇಶದನ್ವಯ ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿ ೧೨೫೦ರೂ.ವರೆಗೆ ಇರುವ ಎಲ್ಲ ಹುದ್ದೆಗಳನ್ನು ತುಂಬಲು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ಅಭ್ಯರ್ಥಿಗಳ ಪಟ್ಟಿ ತರಿಸಿಕೊಂಡು ತುಂಬಬೇಕು. ೧೯೮೪ರ ನಂತರ ಹಲವು ಬಾರಿ ವೇತನ ಪರಿಷ್ಕರಣ ಆಗಿದೆ. ಆದರೆ, ಈ ಆದೇಶಕ್ಕೆ ತಿದ್ದುಪಡಿ ಆಗಿಲ್ಲ. ಈಗ ಉದ್ಯೋಗ ವಿನಿಮಯ ಕೇಂದ್ರಗಳು ನೇಪಥ್ಯಕ್ಕೆ ಸರಿದಿವೆ. ಕೇಂದ್ರ ಸರ್ಕಾರದ ಉದ್ಯೋಗ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯ [No. ೧೪೦೨೪ / ೧ / ೨೦೦೪– EST (D)] ಒಂದು ಸುತ್ತೋಲೆ ಹೊರಡಿಸಿದೆ (ಅನುಬಂಧದಲ್ಲಿದೆ). ಈ ಸುತ್ತೋಲೆ ಹುದ್ದೆಗಳನ್ನು ತುಂಬುವುದಾಗಿ ರಾಷ್ಟ್ರಮಟ್ಟದಲ್ಲಿ ವ್ಯಾಪಕ ಪ್ರಚಾರ ನೀಡಬೇಕು. ಎಲ್ಲ ಮೂಲಗಳಿಂದ ಬಂದ ಎಲ್ಲಾ ಅರ್ಜಿಗಳನ್ನು ಪರಿಗಣಿಸಬೇಕು ಎಂದಿದೆ. ಇದಲ್ಲದೆ ಸೂಚಿಸಿರುವ ಹಲವು ಅಂಶಗಳು ಕೇಂದ್ರ ಸರ್ಕಾರವೇ ಅನುಷ್ಠಾನಗೊಳಿಸಬೇಕು. ಸಂವಿಧಾನದ ಅನುಚ್ಛೇದಕ್ಕೆ–೧೬ಕ್ಕೆ ತಿದ್ದುಪಡಿ ತರಬೇಕಾಗುತ್ತದೆ. ತಂದರೂ ಅದು ೫ ವರ್ಷಕ್ಕೆ ಸೀಮಿತ. ಒಟ್ಟಾರೆಯಾಗಿ ಮಹಿಷಿ ವರದಿ ಜಾರಿಗೆ ಬರಬೇಕಾದರೆ ಸಂವಿಧಾನಕ್ಕೆ ನಾಲ್ಕು ತಿದ್ದುಪಡಿ ತರಬೇಕು. ೧೯೮೪ರ ಆದೇಶವನ್ನು ಬದಲಿಸಬೇಕು. ಈ ಸಂಗತಿಗಳನ್ನು ಗಮನಿಸಿದರೆ ಮಹಿಷಿ ವರದಿ ಜಾರಿಯಲ್ಲಿ ಕೇಂದ್ರ ಸರ್ಕಾರದ ಪಾತ್ರ, ರಾಜ್ಯ ಸರ್ಕಾರಕ್ಕಿಂತಲೂ ಹೆಚ್ಚಿದೆ ಎಂಬುದು ಅರಿವಿಗೆ ಬರುತ್ತದೆ. ವರದಿ ಬಂದು ಮೂರ ದಶಕಗಳಾಗಿವೆ. ಇಲ್ಲಿಯವರೆಗೆ ರಾಜ್ಯ ಸರ್ಕಾರ ಈ ವರದಿಯ ಬಗ್ಗೆ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿರುವುದಕ್ಕೆ ದಾಖಲೆಗಳಿಲ್ಲ. **'ಮಹಿಷಿ ವರದಿಗೆ ಶಾಸನಾಧಾರ ಬೆಂಬಲವಿಲ್ಲದಿರುವುದರಿಂದ ಅದೊಂದು ಸಮಿತಿಯ ವರದಿ, ಅದನ್ನು ಅನುಸರಿಸಿ ಎಂದು ಹೇಳುವಂತಿಲ್ಲ'** ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ದಾವೆಯನ್ನು ತಿರಸ್ಕರಿಸಿದೆ. **[W.A. No. 30179/2013 (S-RES)]**



ಇಲ್ಲಿ ಪ್ರಸ್ತಾಪಿಸಿರುವ ಸಂಗತಿಗಳನ್ನು ಗಮನಿಸಿ ಇಡೀ ವರದಿ ನಿರುಪಯುಕ್ತ ಎನ್ನುವ ತೀರ್ಮಾನಕ್ಕೆ ಬರಲಾಗದು. ಯಾವುದೇ ವರದಿ, ಕಾನೂನು ಎಲ್ಲ ಕಾಲಕ್ಕೂ ಸಲ್ಲುವಂತಿರುವುದಿಲ್ಲ. ಡಾ. ಸರೋಜಿನಿ ಮಹಿಷಿ ಸಮಿತಿಯು ವರದಿ ನೀಡಿದಾಗ ಸರ್ಕಾರಿ ವಲಯದ ಉದ್ಯಮಗಳಲ್ಲೇ ಹೆಚ್ಚು ಉದ್ಯೋಗ ಸೃಷ್ಟಿ ಆಗುತ್ತಿತ್ತು. ಈಗ ಜಾಗತೀಕರಣದ ಪರಿಣಾಮ ಸರ್ಕಾರಿ ವಲಯ ಹಿನ್ನೆಲೆಗೆ ಸರಿದು ಖಾಸಗಿ ಉದ್ಯಮಗಳು, ಬಹುರಾಷ್ಟ್ರೀಯ ಉದ್ಯಮಗಳು ಮುನ್ನೆಲೆಗೆ ಬಂದಿವೆ. ಈ ಬದಲಾದ ಸನ್ನಿವೇಶಕ್ಕೆ ಮಹಿಷಿ ವರದಿಯನ್ನು ಪ್ರಸ್ತುತಗೊಳಿಸಲು ಕಾರ್ಯಸಾಧುವಾಗುವ ನೆಲೆಯಲ್ಲಿ ಪರಿಶೀಲಿಸುವ ಅಗತ್ಯವಿದೆ. ಮೂಲ ವರದಿಯ ಆಶಯವನ್ನು ಆಗು ಮಾಡಲು ಇನ್ನಷ್ಟು ಅಂಶಗಳು ಸೇರಬೇಕಿದೆ.

## ಮಹಿಷಿ ವರದಿಯ ವಿಶ್ಲೇಷಣೆ

ಮಹಿಷಿ ವರದಿ ಪುನರ್ ಪರಿಶೀಲನೆಗಾಗಿ ನಡೆದ ಸಭೆಯಲ್ಲಿ ವರದಿಯನ್ನು ಪ್ರಸ್ತುತಗೊಳಿಸುವುದು, ಕಾನೂನಿನ ರಕ್ಷಣೆ ಹಾಗು ರಾಜ್ಯ ಪ್ರಗತಿ, ಈ ಎಲ್ಲ ದೃಷ್ಟಿಗಳಿಂದ ವಿವರವಾಗಿ ಪರಿಶೀಲಿಸಿ, ವರದಿಯನ್ನು ಕೆಳಕಾಣಿಸಿರುವಂತೆ ವಿಂಗಡಿಸಲು ತೀರ್ಮಾನವಾಯಿತು.

**೧. ರಾಜ್ಯ ಸರ್ಕಾರ ನೇರವಾಗಿ ಅನುಷ್ಠಾನಗೊಳಿಸಬಹುದಾದ ಅಂಶಗಳು**

**೨. ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಬೇಕಿರುವ ಅಂಶಗಳು**

**೩. ಈಗಾಗಲೇ ಅನುಷ್ಠಾನವಾಗಿರುವ ಸಲಹೆಗಳು**

**೪. ಇಂದಿನ ಕಾಲಮಾನಕ್ಕೆ ಹೊಂದುವಂತೆ ಬದಲಿಸಬೇಕಿರುವ ಅಂಶಗಳು**

**೫. ಕೈ ಬಿಡಬಹುದಾದ ಅಂಶಗಳು**

* ಈ ವಿವರಗಳು ಅನುಬಂಧ–೨ರಲ್ಲಿದೆ.

ಡಾ. ಸರೋಜಿನಿ ಮಹಿಷಿ ವರದಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ, ಬೇರೆ ರಾಜ್ಯಗಳಲ್ಲಿ 'ಸ್ಥಳೀಯರಿಗೆ ಉದ್ಯೋಗ'ದ ವಿಚಾರವಾಗಿ ಏನಿದೆ? ಎಂಬ ಸಂಗತಿಗಳನ್ನು ಗಮನಿಸಿ (ಅನುಬಂಧ–೩ರಲ್ಲಿ ವಿವರ ಇದೆ) ಸಮಿತಿಯು ಹಲವು ಮೂಲಗಳಿಂದ ಅದನ್ನು ಖಚಿತಪಡಿಸಿಕೊಂಡು, ಸ್ಥಳೀಯರಿಗೆ ಉದ್ಯೋಗದಲ್ಲಿ ನ್ಯಾಯಯುತ ಪಾಲು ಸಿಗುವಂತಾಗಲು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮ ಮತ್ತು ಕೇಂದ್ರ ಸರ್ಕಾರದಿಂದ

ಆಗಬೇಕಾಗಿರುವ ಕ್ರಮವನ್ನು 'ಸಮರ್ಥನೀಯ ಮಾಹಿತಿ'ಯೊಂದಿಗೆ ಈ ಪರಿಷ್ಕೃತ ವರದಿಯನ್ನು ಸಲ್ಲಿಸಲಾಗುತ್ತಿದೆ. ರಾಜ್ಯ ಸರ್ಕಾರ ಒಂದು ಕಾಲ ಮಿತಿಯಲ್ಲಿ ಈ ವರದಿಯು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಲು ಮತ್ತು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕಿರುವ ಅಂಶಗಳನ್ನು ನೇರವಾಗಿ ಕೇಂದ್ರ ಸರ್ಕಾರಕ್ಕೆ ಒಪ್ಪಿಸಿ ಅದನ್ನು ಶಾಸನಬದ್ಧಗೊಳಿಸಲು ಒತ್ತಾಯಿಸಬೇಕೆಂದು ಮನವಿ ಮಾಡುತ್ತೇವೆ.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರ ಪರಿಷ್ಕರಿಸಿದ ವರದಿಯಲ್ಲಿ **ಕಾಯ್ದೆ ಮಾಡಲು ಅಗತ್ಯವಿರುವ ೧೪ ಅಂಶಗಳನ್ನು ಪಟ್ಟಿಮಾಡಿ ಘನಸರ್ಕಾರದ ಅವಗಾಹನೆಗೆ ಸಲ್ಲಿಸುತ್ತಿದ್ದೇವೆ** ಮತ್ತು ಅನುಷ್ಠಾನಕ್ಕೆ ಸಹಕಾರಿಯಾಗುವಂತೆ ಕಾಯ್ದೆ ಮಾಡುವ ಸೂಕ್ತ ಕ್ರಮಕ್ಕಾಗಿ ಒತ್ತಾಯಪೂರ್ವಕ ಮನವಿ ಮಾಡುತ್ತಿದ್ದೇವೆ.

**ಧನ್ಯವಾದಗಳೊಂದಿಗೆ**



**ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಸ್ಥಳ : ಬೆಂಗಳೂರು
ದಿನಾಂಕ : ೦೧ ಫೆಬ್ರವರಿ ೨೦೧೭

---

ವಿಶೇಷ ನೆನಪು : ಆದೇಶ ಸಂಖ್ಯೆ ಕಸಂವಾ/೨ ಕೆಓಎಲ್ ೨೦೧೬, ದಿನಾಂಕ: ೧೩.೬.೨೦೧೬ ರಂತೆ ಪರಿಷ್ಕರಣಾ ಸಮಿತಿಯನ್ನು ಸರ್ಕಾರ ರಚಿಸಿತು. ಆ ಸಮಿತಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಡಾ.ಎಲ್. ಹನುಮಂತಯ್ಯನವರು ನೇಮಕವಾಗಿದ್ದರು.

## ಪರಿವಿಡಿ


೧. ರಾಜ್ಯ ಸರ್ಕಾರ ಅನುಷ್ಠಾನಗೊಳಿಸಲು ಸಲಹೆ ಮಾಡಿರುವ ಅಂಶಗಳು ೧೩

೨. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಸಲಹೆಗಳು ೨೧

೩. ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಲಹೆಗಳು ೪೫

೪. ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಬೇಕಾದ ಅಂಶಗಳು ೪೯

೫. ಈಗಾಗಲೇ ಅನುಷ್ಠಾನವಾಗಿರುವ ಅಂಶಗಳು ೫೨

೬. ಕೈ ಬಿಡಬಹುದಾದ ಅಂಶಗಳು ೫೫

೭. ಇಂದು ಈ ಸಲಹೆಗಳು ಅಪ್ರಸ್ತುತ ಅರ್ಥ ಕಳೆದುಕೊಂಡಿವೆ ೫೮

# ರಾಜ್ಯ ಸರ್ಕಾರ ಅನುಷ್ಠಾನಗೊಳಿಸಲು ಸಲಹೆ ಮಾಡಿರುವ ಅಂಶಗಳು

೧. ಎಲ್ಲ ಖಾಸಗಿ ವಲಯದ [ಐಟಿ, ಬಿಟಿ, ಬಹುರಾಷ್ಟ್ರೀಯ ಸಂಸ್ಥೆಗಳು, ವ್ಯಾಪಾರ ವಾಣಿಜ್ಯ, ರೆಸಾರ್ಟ್, ಆಸ್ಪತ್ರೆ, ಮನರಂಜನಾ ಕೇಂದ್ರ, ಹೋಟೆಲ್ ಉದ್ಯಮ, ಸಾರಿಗೆ, ಪ್ರವಾಸೋದ್ಯಮ, ನವೋದ್ಯಮ (**start ups**), ಇ–ಕಾಮರ್ಸ್, ಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯ, ಇತ್ಯಾದಿಗಳನ್ನೊಳಗೊಂಡಂತೆ] ಉದ್ಯಮಗಳಿಗೆ ರಾಜ್ಯ ಸರ್ಕಾರ ಹಲವು ಮೂಲಭೂತ [ನೆಲ, ಜಲ, ವಿದ್ಯುತ್, ರಸ್ತೆ, ತೆರಿಗೆ ರಜೆ ಇತ್ಯಾದಿ] ಸವಲತ್ತುಗಳನ್ನು ನೀಡುತ್ತಿರುವುದರಿಂದ ಮಹಿಷಿ ವರದಿ ಅನ್ವಯ 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳಿಗೆ ನೂರಕ್ಕೆ ನೂರರಷ್ಟು ಕನ್ನಡಿಗರನ್ನೇ ನೇಮಕ ಮಾಡಿಕೊಳ್ಳುವ ಬಗ್ಗೆ ಕರಾರು ಪತ್ರದಲ್ಲೇ ಪೂರ್ವಷರತ್ತು ಹಾಕಬೇಕು. ಉನ್ನತ ಹುದ್ದೆಗಳಲ್ಲಿ ಕನ್ನಡಿಗರಿಗೆ ೮೦%ರಷ್ಟು ಉದ್ಯೋಗಗಳು ಸ್ಥಳೀಯರಿಗೆ ನೀಡಬೇಕು. ರಾಜ್ಯದಲ್ಲಿರುವ ತಾಂತ್ರಿಕ ಕಾಲೇಜುಗಳಲ್ಲಿಯೇ ಕ್ಯಾಂಪಸ್ ಆಯ್ಕೆ ಮಾಡಲು ಸೂಚಿಸಬೇಕು. ಈ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಸಂಬಂಧಪಟ್ಟ ಮಾಹಿತಿ ತಂತ್ರಜ್ಞಾನ/ಕಾರ್ಮಿಕ ಇಲಾಖೆಗಳು ಪರಿಶೀಲಿಸಬೇಕು. ಸದರಿ ಇಲಾಖೆಗಳು ನೀಡುವ ಮಾಹಿತಿಗಳ ಪರಾಮರ್ಶೆಯನ್ನು ನಡೆಸುವ, ಲೋಪವಿದ್ದಲ್ಲಿ ಸಂಬಂಧಪಟ್ಟ ಉದ್ಯಮ, ಸಂಸ್ಥೆ ಅಥವಾ ಇಲಾಖೆಗಳ ಮೇಲೆ ಶಿಸ್ತುಕ್ರಮವನ್ನು ಕೈಗೊಳ್ಳುವ ಅಧಿಕಾರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಬೇಕು.

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೪)*

ಡಾ. ಸರೋಜಿನಿ ಮಹಿಷಿಯವರು ವರದಿ ನೀಡಿದಾಗ ಐಟಿ/ಬಿಟಿ, ಬಹುರಾಷ್ಟ್ರೀಯ ಸಂಸ್ಥೆಗಳು ಇತ್ಯಾದಿ ಇತ್ಯಾದಿ ಗಳಿರಲಿಲ್ಲ. ಹಾಗಾಗಿ ಮಹಿಷಿ ವರದಿಯಲ್ಲಿ ಸೇರಿಲ್ಲ. ಇದನ್ನು ಗಮನಿಸಿ ಕೈಗಾರಿಕಾ ನೀತಿ–೨೦೧೪–೧೯ರಲ್ಲಿ ಕೆಳಗಿನಂತೆ ಸೇರಿಸಿದೆ. ಮಹಾರಾಷ್ಟ್ರದಲ್ಲೂ ಇಂತಹ ಕಾನೂನು ಇದೆ.

i. ಹೊಸದಾಗಿ ಕೈಗಾರಿಕಾ ಬಂಡವಾಳ ಹೂಡಿಕೆಯಾಗುವ ಎಲ್ಲಾ ಉದ್ಯಮಗಳು ಅತ್ಯಧಿಕ ಹೆಚ್ಚುವರಿ ಉದ್ಯೋಗಾವಖಾಶಗಳನ್ನು ಸೃಷ್ಟಿಸಿ, ಒಟ್ಟು ಉದ್ಯೋಗದ ಆಧಾರದ ಮೇಲೆ ಕನ್ನಡಿಗರಿಗೆ ಶೇಕಡ ೭೦% ರಷ್ಟನ್ನು ನೀಡಬೇಕು ಹಾಗೂ ಗುಂಪು–ಡಿ ಯಲ್ಲಿ ಶೇಕಡ ೧೦೦ರಷ್ಟು ಒದಗಿಸಬೇಕು.

*(ಕರ್ನಾಟಕ ಕೈಗಾರಿಕಾ ನೀತಿ–೨೦೧೪–೧೯ ಪುಟ. ೭೭)*

(All new industrial investment projects shall endeavor to create maximum possible additional direct employment opportunities with a minimum employment of 70% to Kannadigas on an overall basis and 100% in case of Group D employees.' *Industrial Policy 2014-19 - Page 77)*

ii. Government of Maharashtra Industry, Energy & Labour Department, G.R.No. ELP-2008 / C.No.93 / Ind-6, Date: 17th November, 2008.

Government of Maharashtra has a policy in place to ensure that local persons of the State get their due share in gainful employment arising from the growth in industrial activity. Accordingly, all industrial enterprises are expected to ensure that 50% of all supervisory staff, and 80% of all employees (including supervisory staff) are local persons, and also that the Head of the Human Resources / In charge of the recruitment is a person with knowledge of Marathi. While encouraging that the maximum number



**೨. ರಾಜ್ಯದಲ್ಲಿ ವ್ಯವಹರಿಸುವ ಎಲ್ಲಾ ಬ್ಯಾಂಕುಗಳು [ಬಹುರಾಷ್ಟ್ರೀಯ/ ಖಾಸಗಿ ಬ್ಯಾಂಕುಗಳನ್ನೊಳಗೊಂಡಂತೆ] ಗುಮಾಸ್ತರ ಹುದ್ದೆಗೆ ಅಭ್ಯರ್ಥಿ ಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ರಾಜ್ಯದ ಅಧಿಕೃತ ರಾಜ್ಯಭಾಷೆಯಾದ ಕನ್ನಡ ಭಾಷಾಜ್ಞಾನವನ್ನು ಕಡ್ಡಾಯಗೊಳಿಸಬೇಕು. ೧೦ನೇ ತರಗತಿಯಲ್ಲಿ ರಾಜ್ಯಭಾಷೆಯನ್ನು ಒಂದು ಭಾಷೆಯಾಗಿ ವ್ಯಾಸಂಗ ಮಾಡಿ ಉತ್ತೀರ್ಣ ರಾದವರನ್ನು ಬಿಟ್ಟು ಉಳಿದ ಅಭ್ಯರ್ಥಿಗಳು ಕಡ್ಡಾಯವಾಗಿ ರಾಜ್ಯಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಲೇಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೧೬)*

ಭಾರತೀಯ ಸ್ಟೇಟ್ ಬ್ಯಾಂಕ್ ಗುಮಾಸ್ತರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ರಾಜ್ಯದ ಅಧಿಕೃತ ಭಾಷಾ ಜ್ಞಾನವನ್ನು ಕಡ್ಡಾಯಗೊಳಿಸಿದೆ. ೧೦ನೆಯ ತರಗತಿಯಲ್ಲಿ ರಾಜ್ಯ ಭಾಷೆಯಲ್ಲಿ ಉತ್ತೀರ್ಣರಾದವರನ್ನು ಬಿಟ್ಟು ಉಳಿದ ಅಭ್ಯರ್ಥಿಗಳು ಕಡ್ಡಾಯವಾಗಿ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಲೇಬೇಕು ಇಲ್ಲವಾದರೆ ಆಯ್ಕೆಯಿಂದ ಅನರ್ಹಗೊಳಿಸಲಾಗುತ್ತದೆ ಎಂಬಂಶ ಅಧಿಸೂಚನೆಯಲ್ಲಿದೆ.

[Test of knowledge of official and / or local language: Those who produce 10th standard mark sheet / certificate evidencing having studied official(local) language will not be subjected to any Language test. In case of others, language test will be conducted at the time of intrview( if intrview is held) / before final selection(if intrview is not held). Candidates not found to beproficient in official and / or local language would be disqualified.] **Adv no. CRPD/CR/2016-17/01.**

**೩. ರಾಜ್ಯದಲ್ಲಿನ ಸರ್ಕಾರಿ ವಲಯದ ಉದ್ಯಮಗಳಲ್ಲಿ ಎಲ್ಲ ಹುದ್ದೆಗಳಿಗೂ ಕನ್ನಡಿಗರನ್ನೇ ಆಯ್ಕೆ ಮಾಡಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಹೊರ ರಾಜ್ಯದವರನ್ನು ನೇಮಕ ಮಾಡಿಕೊಳ್ಳ ಬೇಕಾದರೆ ರಾಜ್ಯ ಸರ್ಕಾರದ ಪೂರ್ವಾನುಮತಿ ಪಡೆದು ನೇಮಕ ಮಾಡಿಕೊಳ್ಳಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೩)*

"ರಾಜ್ಯ ಸರ್ಕಾರಿ ವಲಯದ ಉದ್ಯಮಗಳಲ್ಲಿ ಉನ್ನತ ಮಟ್ಟದ ತಾಂತ್ರಿಕ ಅರ್ಹತೆಯುಳ್ಳ ಅಭ್ಯರ್ಥಿಗಳು ದೊರಯದೇ ಇರುವ ಹುದ್ದೆಗಳನ್ನು ಬಿಟ್ಟು ಇನ್ನುಳಿದ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು. ಈ ನೀತಿಯ ಪರಿಪಾಲನೆ ಬಗ್ಗೆ ಕೈಗಾರಿಕಾ ಇಲಾಖೆ ಎಚ್ಚರ ವಹಿಸಬೇಕು"ಎಂದು ಮಹಿಷಿ ವರದಿಯಲ್ಲಿದೆ. ಇದು ಸರಿಯಾಗಿ ಪಾಲನೆಯಾಗಿಲ್ಲ ಎಂಬ ಅಭಿಪ್ರಾಯ ಇರುವುದರಿಂದ ಖಚಿತತೆ ದೃಷ್ಟಿಯಿಂದ ಈ ಶಿಫಾರಸನ್ನು ಮಾಡಲಾಗಿದೆ.

೪. **ಅಪ್ರೆಂಟಿಸ್‌ಗಳ ಆಯ್ಕೆಯನ್ನು ತಾಂತ್ರಿಕ ಇಲಾಖೆ ಮಾಡುತ್ತಿದ್ದು, ಅಲ್ಲಿ ಹೊರರಾಜ್ಯದ ಅಭ್ಯರ್ಥಿಗಳು ಬರುತ್ತಿದ್ದಾರೆ. ಅದನ್ನು ತಡೆಯಲು ರಾಜ್ಯದಲ್ಲೇ ಎಸ್.ಎಸ್.ಎಲ್.ಸಿ.ವರೆಗೆ ಓದಿದವರನ್ನು ಮಾತ್ರ ಪರಿಗಣಿಸಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೫)*

ಮಹಿಷಿ ವರದಿಯಂತೆ (ಅಂಶ–೫) ಉದ್ಯಮಗಳಲ್ಲಿ ಅಪ್ರೆಂಟಿಸ್‌ಗಳನ್ನು ನೇಮಕ ಮಾಡುವಾಗ ಉದ್ಯೋಗ ವಿನಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ಈಗ ಉದ್ಯೋಗ ವಿನಿಮಯ ಕೇಂದ್ರ ನೇಪಥ್ಯಕ್ಕೆ ಸರಿದಿರುವುದರಿಂದ ನೇರವಾಗಿ ತಾಂತ್ರಿಕ/ಕೆಲವು ಸಂದರ್ಭಗಲ್ಲಿ ಉದ್ಯಮಗಳೇ ಆಯ್ಕೆ ಮಾಡುತ್ತಿದೆ.

೫. **ರಾಜ್ಯ/ಕೇಂದ್ರ ಸರ್ಕಾರಿ ಉದ್ಯಮಗಳು ಹಾಗು ಇಲಾಖೆಗಳಲ್ಲಿ ದಿನಗೂಲಿ ಕೆಲಸಗಳಿಗೆ ಕಾರ್ಮಿಕರನ್ನು/ನೌಕರರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಕಡ್ಡಾಯವಾಗಿ ಕನ್ನಡಿಗರನ್ನೇ ನೇಮಿಸಿ ಕೊಳ್ಳಬೇಕು. ಹೊರಗುತ್ತಿಗೆಯ ಸಂಸ್ಥೆಗಳಿಗೂ ಈ ಷರತ್ತು ವಿಧಿಸಬೇಕು. ಈ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳುವ ಅಧಿಕಾರವನ್ನು ಕಾರ್ಮಿಕ ಇಲಾಖೆಗೆ ನೀಡಬೇಕು. ಸದರಿ ಮಾಹಿತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಯಮಿತವಾಗಿ ಸಲ್ಲಿಸಬೇಕು.**

*(ಹೊಸ ಸಲಹೆ)*

ಈಗ ಖಾಯಂ ನೇಮಕಾತಿ ನಡೆಯುತ್ತಿಲ್ಲ. ಎಷ್ಟೋ ಉದ್ಯಮ/ಕಚೇರಿಗಳಲ್ಲಿ ಖಾಯಂ ನೌಕರರಿಗಿಂತ ಗುತ್ತಿಗೆ/ಹೊರಗುತ್ತಿಗೆ ಉದ್ಯೋಗಿಗಳೇ ಹೆಚ್ಚಿದ್ದಾರೆ.



ಇಂತಹ ತಾತ್ಕಾಲಿಕ ನೇಮಕಾತಿ ಬಗ್ಗೆ ಸರ್ಕಾರ ಯಾವುದೇ ಮಾರ್ಗ ಸೂಚಿಯಾಗಲಿ, ಆದೇಶವಾಗಲಿ, ನಿಯಂತ್ರಣವಾಗಲಿ ಇಲ್ಲ. ಇದರಿಂದ ಹೊರ ರಾಜ್ಯದವರು ಬರುತ್ತಿದ್ದಾರೆ.

೬. **ರಾಜ್ಯದಲ್ಲಿರುವ ಯಾವುದೇ ಉದ್ಯಮ/ಸಂಸ್ಥೆಗಳಲ್ಲಿ ನೌಕರರ ಪ್ರಮಾಣ ನೂರಕ್ಕೂ ಹೆಚ್ಚಿದ್ದಾಗ ಆ ಸಂಸ್ಥೆಯ ನೇಮಕಾತಿ ಆಯ್ಕೆ ಸಮಿತಿಯಲ್ಲಿ ರಾಜ್ಯ ಸರ್ಕಾರದ ಕನ್ನಡ ಪ್ರತಿನಿಧಿ ಕಡ್ಡಾಯವಾಗಿ ಇರಬೇಕು. ಈ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳುವ ಅಧಿಕಾರವನ್ನು ಕಾರ್ಮಿಕ ಇಲಾಖೆಗೆ ನೀಡಬೇಕು. ಸದರಿ ಇಲಾಖೆಗಳು ನೀಡುವ ಮಾಹಿತಿಗಳ ಪರಾಮರ್ಶೆಯನ್ನು ನಡೆಸುವ, ಲೋಪವಿದ್ದಲ್ಲಿ ಸಂಬಂಧ ಪಟ್ಟ ಉದ್ಯಮಗಳ ಮೇಲೆ ಶಿಸ್ತುಕ್ರಮವನ್ನು ಕೈಗೊಳ್ಳುವ ಅಧಿಕಾರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೨೪)*

ಡಾ. ಸರೋಜಿನಿ  ಮಹಿಷಿ ವರದಿ ೧೦೦ಕ್ಕಿಂತ ಹೆಚ್ಚಿನ ಸಂಖ್ಯೆಯ ನೌಕರರಿರುವ ಖಾಸಗೀ ಉದ್ಯಮಗಳ ನೇಮಕಾತಿ ಆಯ್ಕೆ ಸಮಿತಿಯಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಯನ್ನು ಸೇರಿಸುವಂತೆ ಉದ್ಯಮಿಗಳನ್ನು ಒತ್ತಾಯಿಸಬೇಕು (ಸಲಹೆ–೨೪) ಎಂದಿದೆ. ಒತ್ತಾಯಿಸುವುದು ಎಂದಿರುವುದರಿಂದ ಇದು ಪರಿಣಾಮಕಾರಿಯಾಗಿಲ್ಲ.

೭. **ಖಾಸಗಿ, ಕೇಂದ್ರ ಸಾರ್ವಜನಿಕ ಉದ್ಯಮಗಳ ನೇಮಕಾತಿ ಪಟ್ಟಿಯನ್ನು ನಿಯಮಿತವಾಗಿ ಪ್ರತಿವರ್ಷ ಸಂಬಂಧಪಟ್ಟ ಇಲಾಖೆಗೆ ಕಳುಹಿಸುವುದರ ಜೊತೆಗೆ ಕಡ್ಡಾಯವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೨೮)*

ಡಾ. ಸರೋಜಿನಿ  ಮಹಿಷಿ ವರದಿ ಸಲಹೆಯಂತೆ (ಅಂಶ–೨೮) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಈ ಮಾಹಿತಿಯನ್ನು ತರಿಸಿ ಕೊಳ್ಳುತ್ತಿದೆ. ಉದ್ಯಮಗಳ ಕಳುಹಿಸಿದ ಮಾಹಿತಿಯ ಬಗ್ಗೆ ಕ್ರಮ ಜರುಗಿಸುತ್ತಿರುವ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ. ಕ.ಅ.ಪ್ರಾಕ್ಕೆ ಮಾಹಿತಿಯಿದ್ದರೆ ಅನುಸರಣೆ ಸುಲಭ.

೮. ತಂತ್ರಜ್ಞಾನದ ಕಾಲೋಚಿತ [update] ಬೆಳವಣಿಗೆಗೆ ಅನುಗುಣವಾಗಿ ಉದ್ಯೋಗ ತರಬೇತಿ ಕೇಂದ್ರಗಳಲ್ಲಿ ತರಬೇತಿ (ಐ.ಟಿ.ಐ) ನೀಡುವ ಹೊಣೆಯನ್ನು ನಿರ್ವಹಿಸಲು ಪ್ರತ್ಯೇಕ ತಾಂತ್ರಿಕ ಸಲಹಾ ಮಂಡಳಿಯನ್ನು ಆಯೋಜಿಸಬೇಕು. ಇದನ್ನು ಉದ್ಯೋಗ ಮತ್ತು ತರಬೇತಿ ಇಲಾಖೆ ಕಡ್ಡಾಯವಾಗಿ ನಿರ್ವಹಿಸಬೇಕು.

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೨೧)*

ಮಹಿಷಿ ವರದಿಯಲ್ಲಿ ಈ ಸಲಹೆಯಿದೆ. ನಮಗೆ ಅಗತ್ಯವಾದ ಕೌಶಲವುಳ್ಳ (Trade) ಕೆಲಸಗಾರರು ಸಿಗುತ್ತಿಲ್ಲ ಎಂದು ಉದ್ಯಮಿಗಳು ಹೇಳುತ್ತಾರೆ. ಇತ್ತೀಚೆಗೆ ಉದ್ದಿಮೆಗಳ ಒಕ್ಕೂಟದ ಅಧ್ಯಕ್ಷರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

(ಹಿಂದೆ ಜಿಲ್ಲಾ ಮಟ್ಟದಲ್ಲಿ ವೃತ್ತಿ ತರಬೇತಿಗೆ ಕೈಗಾರಿಕಾ ತರಬೇತಿ ಕೇಂದ್ರ ಐ.ಟಿ.ಐ.ಗಳಿದ್ದವು, ಅವುಗಳು ಕಾಲಕ್ಕನುಗುಣವಾಗಿ ನವೀಕರಣಗೊಂಡಿಲ್ಲ ಖಾಸಗಿ ಐ.ಟಿ.ಐ.ಗಳಲ್ಲಿ ನಿರೀಕ್ಷಿತ ಗುಣಮಟ್ಟದ ತರಬೇತಿ ಸಿಗುತ್ತಿಲ್ಲ. ಆದ್ದರಿಂದ ಸರ್ಕಾರ ಉದ್ಯಮಗಳ ಸಹ ಭಾಗಿತ್ವದಲ್ಲಿ ಕುಶಲ ಕೇಂದ್ರಗಳನ್ನು ತೆರೆಯಬೇಕು)

೯. ಕೇಂದ್ರ ಸರ್ಕಾರವು ಪ್ರಕಟಿಸುತ್ತಿರುವ ಎಂಪ್ಲಾಯ್‌ಮೆಂಟ್ ನ್ಯೂಸ್ ಮಾದರಿಯಲ್ಲಿ ರಾಜ್ಯ ಸರ್ಕಾರವು ರಾಜ್ಯದಲ್ಲಿ ಸೃಷ್ಟಿಯಾಗುವ ಎಲ್ಲ ವಲಯಗಳ ಉದ್ಯೋಗಾವಕಾಶವನ್ನು ಕನ್ನಡದಲ್ಲಿಯೇ ಜಾಹಿರಾತಿನ ಮೂಲಕ ಕನ್ನಡದ ಮುಖ್ಯ ರಾಜ್ಯ ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಅಲ್ಲದೆ ಇಂಥದ್ದನ್ನು ಪ್ರಕಟಿಸುವ ಅಧಿಕೃತ ಪತ್ರಿಕೆಯೊಂದನ್ನು [ಉದ್ಯೋಗ ವಾರ್ತಾ ಪತ್ರಿಕೆ] ಸರ್ಕಾರವೇ ಪ್ರಕಟಿಸಬೇಕು. ಇದರ ಜೊತೆಗೆ ಎಲ್ಲ ವಲಯಗಳಲ್ಲಿ ಸೃಷ್ಟಿಯಾಗುವ ಉದ್ಯೋಗ ಮಾಹಿತಿಯನ್ನು ನೀಡುವ ಜಾಲತಾಣವೊಂದನ್ನು [web portal] ರಚಿಸಿ ಸರ್ಕಾರವೇ ನಿರ್ವಹಿಸಬೇಕು. ಈ ಆದೇಶ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರವನ್ನು ವಾರ್ತಾ ಇಲಾಖೆಗೆ ನೀಡಬೇಕು. ಸದರಿ ಮಾಹಿತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಾರ್ತಾ ಇಲಾಖೆ ನಿಯಮಿತವಾಗಿ ಸಲ್ಲಿಸಬೇಕು.

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೫೭)*



ಮಹಿಷಿ ವರದಿಯಲ್ಲಿರುವ ಸಲಹೆ (ಅಂಶ ೫೭) ಅದು ಇಂದಿಗೂ ಪ್ರಸ್ತುತ.

೧೦. (ಅ) ಸ್ಥಳೀಯರು ಎಂದು ಪರಿಗಣಿಸಲು ರಾಜ್ಯದಲ್ಲಿ ೧೫ ವರ್ಷಗಳ ಕಾಲ ರಾಜ್ಯದಲ್ಲಿ ವಾಸವಾಗಿರಬೇಕಲ್ಲದೆ, ಕನ್ನಡ ಭಾಷಾ ಜ್ಞಾನವೂ ಇರಬೇಕು. ಅದಕ್ಕೆ ಕೆಳಗಿನ ದಾಖಲೆಗಳಲ್ಲಿ ಒಂದನ್ನು ಅವರು ಹೊಂದಿರಲೇಬೇಕು:

೧. ಶಾಲೆಯ ಸರ್ಟಿಫಿಕೇಟ್ (ಎಸ್.ಎಸ್.ಎಲ್.ಸಿ.ವರೆಗೆ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಅಭ್ಯಸಿಸಿರಬೇಕು)

೨. ಪಡಿತರ ಚೀಟಿ (ರೇಷನ್ ಕಾರ್ಡ್)

೩. ಜನ್ಮ ದಾಖಲೆ (ಬರ್ಥ್ ಸರ್ಟಿಫಿಕೇಟ್)

೪. ಆಧಾರ್ ಕಾರ್ಡ್

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೯)*

(ಆ) ಹೊರರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ೧೦ನೇ ತರಗತಿಯವರೆಗೆ ಓದಿದ ವಿದ್ಯಾರ್ಥಿಗಳಿಗೂ ರಾಜ್ಯದಲ್ಲಿ ಓದಿರುವ ವಿದ್ಯಾರ್ಥಿಗಳಿಗೆ ಸಿಗುವ ಎಲ್ಲಾ ಸವಲತ್ತುಗಳೂ ಸಿಗಬೇಕು. ಅವರಿಗೆ ಉನ್ನತ ಶಿಕ್ಷಣಕ್ಕೆ ಹಾಗೂ ಉದ್ಯೋಗಕ್ಕೆ ತೆರೆದ ಅವಕಾಶವಿರಬೇಕು.

*(ಹೊಸ ಸಲಹೆ)*

೧೧. ರಾಜ್ಯದಲ್ಲಿರುವ ಕೇಂದ್ರ/ರಾಜ್ಯ ಸರ್ಕಾರಿ ಕಚೇರಿಗಳು, ಉದ್ಯಮಗಳು ಹಾಗೂ ಖಾಸಗಿ ವಲಯಗಳಲ್ಲಿ ನಾಮಫಲಕ, ಜಾಹಿರಾತು ಫಲಕ ಹೆದ್ದಾರಿ ಫಲಕಗಳನ್ನು ಹಾಕುವಾಗ ಕಡ್ಡಾಯವಾಗಿ ರಾಜ್ಯ ಭಾಷೆಯಾದ ಕನ್ನಡವನ್ನು ಮೊದಲ ಆದ್ಯತೆಯಾಗಿ ಪ್ರದರ್ಶಿಸಬೇಕು.

*(ಹೊಸ ಸಲಹೆ)*

### ತ್ರಿಭಾಷಾ ಸೂತ್ರದ ಅನುಷ್ಠಾನ, ಭಾರತ ಸರ್ಕಾರ, ಆದೇಶ ಸಂಖ್ಯೆ
No.12019/10/91-OL(Int) dated 28.1.1992

The committee has recommended that all the offices of the Government of India, located in India or abroad, and the institutions receving grants from the Central Government located in A and B regions should also ensure that their respective Name-Plates, Rubber stamps, Letter-Heads, Logos etc. be prepared in Bilingual form and such institution located in C region should get these items prepared in trilingual form while getting these Letter-Heads, Name-Plates etc. prepared, it should be kept in mind that the Size of letters of all the language should be the same.

Region States/Union Territories falling in the Region

A. Bihar, Chhatisgarth, Haryana, Himachal Pradesh, Jharkhan, Madhya Pradesh, Rajasthan, Uttar Pradesh, Uttarakhand States and Andaman & Nicobar Islands, National Capital Territory of Delhi Union Territories.

B. Gujarat, Maharashtra and Paunjab Stages and Chandigarh Union Territory

C. All other States not included in the A and B Regions.

**೧೨. ರಾಜ್ಯದಲ್ಲಿರುವ ಐ.ಸಿ.ಎಸ್.ಸಿ, ಸಿ.ಬಿ.ಎಸ್.ಇ., ಕೇಂದ್ರಿಯ ವಿದ್ಯಾಲಯ, ನವೋದಯ ವಿದ್ಯಾಲಯ ಹಾಗೂ ಇತರ ಆಂಗ್ಲ ಭಾಷೆಯ ಶಿಕ್ಷಣ ಸಂಸ್ಥೆಗಳು ಒಂದರಿಂದ ಹತ್ತನೆ ತರಗತಿಯವರೆಗೆ ರಾಜ್ಯ ಭಾಷೆಯಾದ ಕನ್ನಡವನ್ನು ಒಂದು ವಿಷಯವಾಗಿ ಕಡ್ಡಾಯಗೊಳಿಸಬೇಕು.**

*(ಹೊಸ ಸಲಹೆ)*

**೧೩. ಕೇಂದ್ರ/ರಾಜ್ಯ ಸರ್ಕಾರ ಉನ್ನತ ಶಿಕ್ಷಣ ಅಥವಾ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಕಡ್ಡಾಯವಾಗಿ ಕನ್ನಡದಲ್ಲಿಯೂ ಇರಬೇಕು. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸುವ ಕುರಿತಂತೆ ರಾಜ್ಯ ಸರ್ಕಾರ ಆಯಾ ಇಲಾಖೆಗಳಲ್ಲಿ ಅಗತ್ಯ ಪದ ಭಂಡಾರಗಳನ್ನು, ಪಠ್ಯಗಳನ್ನು ಸೃಷ್ಟಿಸುವ ಕಾರ್ಯ ಮಾಡಬೇಕು.**

*(ಹೊಸ ಸಲಹೆ)*



**೧೪. ಕರ್ನಾಟಕ ಸರ್ಕಾರದ ಆಡಳಿತದಲ್ಲಿ ಬಳಸುವ ಎಲ್ಲ ತಂತ್ರಾಂಶಗಳಲ್ಲಿ, ಸಾರ್ವಜನಿಕ ಸಂಪರ್ಕದಲ್ಲಿ ಬಳಸುವ ಎಲ್ಲ ಸಾಧನಗಳಲ್ಲಿ, ಖಾಸಗಿ ವಲಯದ ಸಾರ್ವಜನಿಕ ಸಂಪರ್ಕದ ಅಭಿವ್ಯಕ್ತಿ ಮಾಹಿತಿಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕು.**

*(ಹೊಸ ಸಲಹೆ)*

ಕರ್ನಾಟಕ ಸರ್ಕಾರ, ನಿಗಮ ಮಂಡಳಿಗಳು, ಆಡಳಿತದಲ್ಲಿ ಬಳಸುವ ತಂತ್ರಾಂಶಗಳು.

ಸಂಪರ್ಕ ಸಾಧನವಾಗಿ ಬಳಸುವ ಅಂತರ್ ಜಾಲತಾಣ, ಜಾಲತಾಣ (ವೆಬ್‌ಸೈಟ್), ಫೇಸ್‌ಬುಕ್, ಟ್ವಿಟರ್, ವಾಟ್ಸಪ್, ಲಿಂಕ್ಡ್ ಇನ್, ಮೊಬೈಲ್ ಆಪ್‌ಗಳು (ಅನ್ವಯ ತಂತ್ರಾಂಶಗಳು), ಮೊಬೈಲ್ ವ್ಯಾಲೆಟ್, ಮುಂತಾದವು.

ಬ್ಯಾಂಕಿಂಗ್, ಹಣ ಪಾವತಿ, ಮುಂತಾದೆಡೆ ಕನ್ನಡದಲ್ಲಿ ವ್ಯವಹಾರ

ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆಗಳು, ಸಂಪರ್ಕ, ಆಂತರಿಕ ಆಡಳಿತ.

ದೂರವಾಣಿ ಸಾಧನಗಳಲ್ಲಿ ಕನ್ನಡದ ಬಳಕೆಗೆ ಅವಕಾಶ (ಕೇಂದ್ರ ಸರ್ಕಾರ ಕಡ್ಡಾಯಗೊಳಿಸಬೇಕು).

ಕೇಂದ್ರ ಸರ್ಕಾರವು ತಂತ್ರಾಂಶದಲ್ಲಿ ಭಾರತೀಯ ಭಾಷೆಗಳ ಬಳಕೆ ಸಂಬಂಧ ಹೊರಡಿಸಿರುವ ಆದೇಶದ (IS I6333 : Part- 3, 2016) ಪ್ರತಿ ಕೆಳಗಿನಂತಿದೆ.

**GAZETTE OF THE INDIA, EXTRAORDINARY**

[Part II, Section 3, Sub-section (ii)]

**MINISTRY OF ELECTRONICS AND INFORMATION TECHNOLOGY**

New Delhi, the 24th October, 2016

**ORDER**

**SUBJECT: Mandating Indian Language Support for Mobile Phones as per IS 16333 (Part 3).**

In exercise of the power conferred by clause 10(1)(p) of Bureau of Indian Standard Act,1986 (63 of 1986) and in pursuance of clause (fa) of the rule 13 of the Bureau of Indian Standards Rules, 1987, the Central Government, hereby includes the Indian language support for mobile phone as per IS 16333 (Part-3) to the Schedule of "Electronics and Information Technology Goods (Requirement for Compulsory Registration) Order, 2012".

2. The provisions of "Electronics and Information Technology Goods (Requirements for Compulsory Registration) Order, 2012" except paragraph 1(2), shall apply for the aforesaid inclusion by virtue of this Order w.e.f. 1st July 2017.

Note: The Principal Order was published in the Gazette of India, Extraordinary vide S.O. number 2357(E), dated 3rd October, 2012 and subsequently amended vide S.O. 2034(E) dated 5th July 2013, S.O. 3022(E) dated 4th Oct 2013, S.O. 2905(E) dated 13th Nov 2014, S.O. 345(E) dated 3rd Feb 2016 and S.O. 638(E) dated 10th Feb 2016.

24/10/2016

(Rajiv Bansal)
Joint Secretary
F. No. 8(81)2015-IPHW

IS 16333 (Part 3) : 2016

**Mobile Phone Handsets** Part 3 Indian Language Support for Mobile Phone Handsets — Specific Requirements

**1 SCOPE**

This standard (Part 3) defines the requirements for mobile phone handsets for inputting of text in English, Hindi and at least one additional Indian official language along with facility of message readability for all 22 Indian official languages.

**2 REFERENCES**

The standard given below contains provisions, which through reference in this text constitute provisions of this standard. At the time of publication, the editions indicated were valid. All standards are subject to revision, and parties to agreement based on this standard are encouraged to investigate the possibility of applying the most recent editions of the standards listed as follows:

| *IS No.* | *Title* |
|---|---|
| 16333 (Part 1) : 2015 | Mobile phone handsets: Part 1 Safety requirements |
| 16350 : 2016 | Enhanced inscript keyboard layout. |

# ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಸಲಹೆಗಳು

(ಈ ಬಗ್ಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಒತ್ತಾಯಿಸಬೇಕು)

**೧. ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯವಿರುವ ಈ ಕಾಲಘಟ್ಟದಲ್ಲಿ 'ಸ್ಥಳೀಯರಿಗೆ ಆದ್ಯತೆ' ಅನ್ನುವ ವಿಚಾರಕ್ಕೆ ವಿರೋಧವಿರುವುದಿಲ್ಲ. ಅದನ್ನು ಪರಿಗಣಿಸಿ ಸರ್ಕಾರ ಮತ್ತು ಖಾಸಗಿ ಉದ್ಯಮಗಳಲ್ಲಿ ಅಧಿಕಾರೇತರ ಹುದ್ದೆಗಳಲ್ಲಿ ೮೦% ರಷ್ಟು ಪ್ರಮಾಣವನ್ನು ಸ್ಥಳೀಯರಿಗೆ ಮೀಸಲಿರಿಸುವ ರಾಷ್ಟ್ರೀಯ ಉದ್ಯೋಗ ನೀತಿಯನ್ನು ರೂಪಿಸಲು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ರಾಷ್ಟ್ರೀಯ ಸಭೆಯಲ್ಲಿ ಆಗ್ರಹಿಸಬೇಕು. ಈ ಬಗ್ಗೆ ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಕಾಯ್ದೆಯನ್ನು ಅಂಗೀಕರಿಸುವಂತೆ ನೋಡಿಕೊಳ್ಳಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೧)*

ಬಹುತೇಕ ರಾಜ್ಯಗಳು ಸ್ಥಳೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಿವೆ. ಈ ವಿಚಾರದ ಮಾಹಿತಿಯು ಅಡಕದಲ್ಲಿದೆ

**೧. ಕೇಂದ್ರ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕುಗಳ ಸಿಬ್ಬಂದಿ ಆಯ್ಕೆಯ ನೇಮಕಾತಿ ಮಂಡಳಿಗಳನ್ನು ರದ್ದು ಮಾಡಿ, ಎಲ್ಲ ಬ್ಯಾಂಕುಗಳ ಸಿಬ್ಬಂದಿ ಆಯ್ಕೆಯನ್ನು ಕೇಂದ್ರೀಕೃತಗೊಳಿಸಿ Institute of Banking Personnel Selection (IBPS) ಮೂಲಕ ನಡೆಸುತ್ತಿದೆ. ಸಂವಿಧಾನದ ಷೆಡ್ಯೂಲ್–೮ ರಲ್ಲಿರುವ ಎಲ್ಲ ಬಾಷೆಗಳಲ್ಲೂ ಪರೀಕ್ಷೆ ನಡೆಸುವಂತೆ ಆದೇಶಿಸಲು ಕೇಂದ್ರ ವಿತ್ತ ಸಚಿವರನ್ನು ಒತ್ತಾಯ ಮಾಡಬೇಕು.**

ಭಾರತೀಯ ಸ್ಟೇಟ್ ಬ್ಯಾಂಕ್ ಗುಮಾಸ್ತರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ರಾಜ್ಯದ ಅಧಿಕೃತ ಭಾಷಾ ಜ್ಞಾನವನ್ನು ಕಡ್ಡಾಯಗೊಳಿಸಬೇಕು. ೧೦ನೇಯ ತರಗತಿಯಲ್ಲಿ ರಾಜ್ಯ ಭಾಷೆಯಲ್ಲಿ ಉತ್ತೀರ್ಣರಾದವರನ್ನು ಬಿಟ್ಟು ಉಳಿದ ಅಭ್ಯರ್ಥಿಗಳು ಕಡ್ಡಾಯವಾಗಿ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಲೇಬೇಕು ಇಲ್ಲವಾದರೆ ಆಯ್ಕೆಯಿಂದ ಅನರ್ಹಗೊಳಿಸಲಾಗುತ್ತದೆ ಎಂಬಂಶ ಅಧಿಸೂಚನೆಯಲ್ಲಿದೆ.

[**Test of knowledge of official and/ or local language:** Those who produce 10th standard mark sheet / certificate evidencing having studied official(local) language will not be subjected to any Language test. In case of others, language test will be conducted at the time of intrview( if intrview is held) / before final selection(if intrview is not held). Candidates not found to beproficient in official and / or local language would be disqualified.] **Adv no. CRPD/CR/2016-17/01.**

೩. **ಉದ್ಯೋಗಿಗಳ ವೇತನ ಶ್ರೇಣಿ ಆಗಾಗ ಬದಲಾಗುವುದರಿಂದ 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳನ್ನು ಸ್ಥಳೀಯರಿಗೇ (ಕನ್ನಡಿಗರಿಗೆ) ಮೀಸಲಿಡಬೇಕು. ಹಾಗೂ ಅಧಿಕಾರಿಗಳ ಹಂತದಲ್ಲಿ ಶೇ.೮೦ ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡಬೇಕು ಮತ್ತು ಆಡಳಿತ ಪ್ರಶಿಕ್ಷು (Management Trainees) ಆಯ್ಕೆ ಮಾಡುವಾಗ ರಾಜ್ಯದಲ್ಲಿರುವ ಎಂಜಿನಿಯರಿಂಗ್ ಕಾಲೇಜುಗಳಲ್ಲಿಯೂ ಕಡ್ಡಾಯವಾಗಿ 'ಕ್ಯಾಂಪಸ್ ಆಯ್ಕೆ' ಪ್ರಕ್ರಿಯೇ ನಡೆಯಬೇಕು. ಈ ನಿಯಮ ಪಾಲನೆ ಆಗಲು ಆಯ್ಕೆ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಆಯಾ ರಾಜ್ಯ ಸರ್ಕಾರಗಳ ಪ್ರತಿನಿಧಿ ಇರಲೇಬೇಕು ಹಾಗೂ ಉದ್ಯೋಗಾವಕಾಶ ಪ್ರಮಾಣವನ್ನು ಕಾರ್ಖಾನೆಯ Employment rules/Factories Actನಲ್ಲಿ ಸೇರಿಸಿ ಅದನ್ನು ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೨)*



ಕೇಂದ್ರ ಸರಕಾರದ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಸಂಸ್ಥೆಯು ಸರಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿ ರೂ. ೧,೨೫೦ ರವರೆಗೆ ಇರುವ ಎಲ್ಲಾ ಹುದ್ದೆಗಳಿಗೆ ನ್ಯಾಷನಲ್ ಎಂಪ್ಲಾಯ್‌ಮೆಂಟ್ ಸರ್ವಿಸಸ್ ಮೂಲಕ ಅಭ್ಯರ್ಥಿಗಳನ್ನು ನೇಮಕ ಮಾಡಬೇಕೆಂದು ೧೯೮೪ರಲ್ಲಿ ಆದೇಶಿಸಿತ್ತು. ಇದನ್ನು ತಿದ್ದುಪಡಿಮಾಡಿ ವೇತನ ಶ್ರೇಣಿಗೆ ಬದಲಾಗಿ ಸಿ ಮತ್ತು ಡಿ ವರ್ಗದ ಹುದ್ದೆಗಳೆಂದು ನಮೂದಿಸಿ ಆ ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಡಬೇಕು.

೪. **ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ವರೆಗೆ ಓದಿರಬೇಕೆಂಬ ಅಂಶವನ್ನು ಜಾಹಿರಾತಿನಲ್ಲಿ ಸೇರಿಸಲು ಕೇಂದ್ರ ಸರ್ಕಾರವನ್ನು ಕೋರಬೇಕು. ಈ ಸಂಬಂಧ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯದ ೨೦೦೪ರ ಜ್ಞಾಪನಾ ಪತ್ರದನ್ವಯ* ವ್ಯಾಪಕ ಪ್ರಚಾರ ಮಾಡಬೇಕು. ಇದರಿಂದ ಸ್ಥಳೀಯರಿಗೆ ಉದ್ಯೋಗದಲ್ಲಿ ನ್ಯಾಯ ಸಿಗುವುದು ಕಷ್ಟವಾಗಿರುವುದರಿಂದ ಉದ್ದಿಮೆ ಇರುವ ರಾಜ್ಯದ ಆಡಳಿತ ಭಾಷಾಜ್ಞಾನ ಕಡ್ಡಾಯ ಮಾಡುವಂತೆ ಕೇಂದ್ರಕ್ಕೆ ಸೂಚಿಸಬೇಕು.**

*(ಹೊಸ ಸಲಹೆ)*

Government of India, Ministry of Personnel, Public Grievances and Pensions Order No.14024/1/96-Estt(D), dated 18 May 1998.

೫. **National Council for Vocational Training ನಡೆಸುವ ಪರೀಕ್ಷೆಗಳನ್ನು ಕನ್ನಡದಲ್ಲೂ ನಡೆಸುವಂತಾಗಬೇಕು.**

*(ಹೊಸ ಸಲಹೆ)*

ತಮಿಳುನಾಡಿನಲ್ಲಿ ಅಪ್ರೆಂಟಿಸ್ ಪರೀಕ್ಷೆಯನ್ನು ತಮಿಳಿನಲ್ಲಿ ಬರೆಯಲು ಅವಕಾಶವಿದೆ. (In All India Trade Test for ITI Students, Question Papers were issued by NCVT only in English and Hindi. The students who are 8th passed and above with rural background find it very difficult to understand the questions

available in English and Hindi. The question papers in Tamil language is being supplied by NCVT with effect from July 2012)

೧. ಬ್ಯಾಂಕುಗಳಲ್ಲಿ ಕನ್ನಡ ಬಳಕೆಯು ನಾಗರಿಕರ ಅನುಕೂಲತೆಯ ದೃಷ್ಟಿಯಿಂದಲೂ ಕನ್ನಡಿಗರ ನೇಮಕದ ದೃಷ್ಟಿಯಿಂದಲೂ ಅವಶ್ಯ ಆದುದರಿಂದ ರಾಜ್ಯದಲ್ಲಿರುವ ಎಲ್ಲಾ ಬ್ಯಾಂಕುಗಳ ಶಾಖೆಗಳು ಕನ್ನಡದಲ್ಲಿಯೇ ವ್ಯವಹರಿಸುವಂತೆ ಒತ್ತಾಯ ಮಾಡಬೇಕು. ಈ ಸಂಬಂಧ ರಾಜ್ಯದಲ್ಲಿರುವ ಎಲ್ಲ ಬ್ಯಾಂಕುಗಳ ಮುಖ್ಯಸ್ಥರಿಗೆ ರಾಜ್ಯ ಸರ್ಕಾರ ಪತ್ರ ಬರೆಯುವುದರ ಜೊತೆಗೇ ಕೇಂದ್ರ ಸರ್ಕಾರದಿಂದಲೂ ಸೂಚನೆ ಬರುವಂತೆ ರಾಜ್ಯ ಸರ್ಕಾರ ನೋಡಿಕೊಳ್ಳಬೇಕು. ಮತ್ತು ಖಾಸಗೀ ಬ್ಯಾಂಕ್‌ಗಳಲ್ಲೂ ಈ ಸಲಹೆಯನ್ನು ಜಾರಿಗೊಳಿಸುವಂತೆ ರಾಜ್ಯ ಸರ್ಕಾರ ಆದೇಶಿಸಬೇಕು.

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೧೭)*

**೨. ಮಹಿಷಿ ವರದಿಯ ಸಲಹೆಯಂತೆ ರಾಷ್ಟ್ರೀಯ ಸಿಬ್ಬಂದಿ ಆಯ್ಕೆ ಆಯೋಗದ (ಸ್ಟಾಫ್ ಸೆಲೆಕ್ಷನ್ ಕಮಿಷನ್ ಆಫ್ ಇಂಡಿಯಾ) ಪ್ರಾದೇಶಿಕ ಕಛೇರಿ ಬೆಂಗಳೂರಿಗೆ ಬಂದಿದೆ. ಆದರೆ, ಹಿಂದಿ–ಇಂಗ್ಲಿಷ್‌ನಲ್ಲಿ ಮಾತ್ರ ಆಯ್ಕೆ ಪರೀಕ್ಷಗಳು ನಡೆಯುತ್ತಿದೆ. ಎಲ್ಲ ಹಂತದ ಪರೀಕ್ಷೆಗಳನ್ನು ಕನ್ನಡದಲ್ಲೂ ಬರೆಯಲು ಅವಕಾಶ ನೀಡುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಬೇಕು.**

*(ಮೂಲ ಮಹಿಷಿ ವರದಿ ಸಲಹೆ ಸಂಖ್ಯೆ –೫೩)*

ಈಗ ರೈಲ್ವೆ ಕೆಳ ಹಂತದ ಹುದ್ದೆಗಳಿಗೆ ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆ ನಡೆಯುತ್ತಿದೆ. ಲಿಖಿತ ಪರೀಕ್ಷೆಗೆ ಹಾಜರಾಗುವವರಿಗೆ ನೀಡುವ ಪತ್ರದಲ್ಲಿ (e-Call letter) ನೀಡರುವ ಸೂಚನೆಯಲ್ಲಿ ಈ ಅಂಶವಿದೆ.

`The candidate can view the quastion paper in any of the fifteen languages including the opted language and answer the questions. Candidates availing assistance of scribe will have to communicate with the scribe only in the language opted by them in the online application'

# ಅನುಬಂಧ–೧

**1. 90% job reservation for unskilled labour. (Business Standard 26-11-2008).**

Orissa Government today decided to reserve jobs for locals in the semi skilled and unskilled category, the reservation will be 90 percent. In the jobs requiring skilled manpower, at least 60 per cent vacancies will be filled up by the locals. Maharashtra last week had announced reservation of 80 per cent jobs for locals in the industries operating in that state.

Similarly, a minimum 30 percent of the supervisor and managerial posts will be filled up from locals; through the appointment of senior executive will be on the basis of merit.

The Orissa government today asked industrial houses to give a thrust on giving employment to local people. Steel and mines secretary Manoj Ahuja said: ``All industrial houses to comply with the state government's guidelines on recruitment. All industrial houses will have to give 90 percent employment to local people in unskilled sector, 60 percent in skilled

and 30 percent in managerial cadres.” The government’s direction came on the second day of the review meeting of various steel industries in Orissa.

**2. 100% Class-IV jobs for local in Kalinga Nagar**
**(Business Standard October 01, 2008)**

In a significant development, the rehabilitation and peripheral development advisory committee (RPDAC), Kalinga Nagar industrial complex, has decided to reserved 100% of the vacant posts in class-IV jobs in the existing industries in Kalinga Nagar area for locals.

**3. Orissa to reserve jobs local in private Sector. (Dillip Satapathy July 8, 2010).**

Orissa intends to make it mandatory for the private sector setting up shop here to reserve for locals 90 % jobs in the unskilled and semi-skilled category, up to 60% in skilled category and 30 percent for the supervisory and managerial cadre.

The state has of late been facing tremendous public resentment over recruitment of a large number of non-Oriya people in different projects being set up here. Orissa has attracted investment worth Rs.6 lakh crore in the recent past.

``All new MoUs for industrial projects and those which are due for renewal will have a compulsory clause reserving jobs for the locals,” Orissa’s Industries Minister Raghunath Mohanty told Business Standard.



A minimum of 90 percent of the jobs in the unskilled and semi-skilled category will be reserved for people belonging to the area where the project is being established. At the skilled level, the minimum reservation for locals will be to the extent of 60 percent, while it will be at least 30 percent for the supervisory or managerial cadre,” the minister said.

``For the posts of senior executives, the companies are free to recruit from the open market.” Mohanty clarified that “locals” would mean those displaced by a project, followed by people domiciled in Orissa.

According to him, to strictly implement the cause, companies signing MoUs will be asked to submit employment status report in a prescribed format to the district collectors, with a copy to the revenue divisional commissioner and department concerned every month.

**4. Government of Maharashtra Industry, Energy & Labour Department,**

G.R.No. ELP-2008 / C.No.93 / Ind-6
Date: 17th November, 2008.

Government of Maharashtra has a policy in place to ensure that local persons of the State get their due share in gainful employment arising from the growth in industrial activity. Accordingly, all industrial enterprises are expected to ensure that 50% of all supervisory staff, and 80% of all employees (including supervisory staff) are local persons, and also that the Head of the Human Resources / In charge of the

recruitment is a person with knowledge of Marathi. While encouraging that the maximum number

5. **Maharashtra makes job preference for locals more stringent (The HINDU Tuesday, Nov 18, 2008).**

According to Mr. Aziz Khan, Principal Secretary, Industries Department, since 1968 the government has a longstanding policy of giving 80 percent prefernce to local people in jobs in small, medium and large industries. Since 1968, there have been four GRs on the subject but this one for the first time draws up a way to operationalise the policy and identify gaps, if any, in implementing it.

6. **Maharashtra CM wants more jobs for locals.**

Mumbai: In a surprise move, Maharashtra chief minister Ashok Chavan on Saturday called for "more importance to be given to locals" in job opportunities, thus joining in the likes of MNS chief Raj Thackery and Shiv Sena supreme Bal Thackery. "Locals must be given importance. Whoever is a domicile of Maharashtra must first get an employment opportunity," Chavan said at a fuction today.

Chavan, however, said his government does not support agitations based on languages and region. "It is not our policy."

He said, "Irrespective of the language people of Maharashtra speak or the belief they follow, we are concerned about their employment and request Mamatha Banerjee to pay heed to this matter."



Following the request by chief minister Ashok Chavan on Saturady and against the backdrop of MNS attacking candidates from North India appearing in railway exams in Maharashtra, railway minister Mamata Banerjee today said the tests will be conducted in regional languages simultaneously.

``The railway exams will be conducted in regional languages simultaneously apart from English and Hindi. In Maharashtra, the exams will be held in Marathi and in other states, these will be held in local language," she told reporters here. Concerned over growing congestion in the existing trains, chief ministers Ashok Chavan made a request that there was a need for more train services in the state.

7. **Jobs for Sons of Soil - CMS Favour national policy.**

The Vilasrao Deshmukh Government is now busy formulating a policy to implement a 35-years old order that reserve 80 per cent of jobs in the new industries for the locals. A standing instruction to opt for locals has already been issued to the industries, according to the Chief Minister.

A new order will incorporate some changes. Satte Chief Ministers elsewhere concede there is need to provide a better deal for the locals. But this cannot at the cost of national unity and integrity. They feel there is need for the Prime Minister to call a conference of Chief Ministers to forge a national policy on the question of reservation of jobs for sons of the soil.

8. **Job Reservation To Locals In Uttaranchal (Pti -oct 1, 2005)**

Uttaranchal to reserve 70 percent jobs in non-technical posts in Industries for local youths. The decession taken at arecent cabinet meeting gave the Industries six-month's time to fill up the vacancies.

For this purpose, the cabinet had also cleared a proposal to set up a State Council with the Chief Minister as its chairman, which would work in tandem with industries for filling the job reservation, although government statstics showed industries are voluntarily providing more than 80% jobs to local youths.

**Khaduri gets Serious on jobs for locals (Dehradun, 5 may 2007)**

Admitting that private industries in Uttarakhand are soft-pending on the issue of reserving 70 percent jobs for local youths, Chief Minister BC Khanduri has asked chief secretary SK Das to prepare a comprehensive report on the issue.

**Congress regime made a rule directing all new units to reserve 70 per cent jobs for local youths. News Source: http//www.hindustantimes.com**

9. **Himachal Pradesh CM Dhumal wants 70% jobs for locals in Central sector projects (Express new service)**

Shimla, September 12 : The state has expressed its displeasure to the Center for failure to privide mandatory 70 percent jobs to Himachalis in the Central sector and venture (JV) hydro- elecric projects.

Himachal Pradesh, through a legislation passed during the erlier Congress regime, had reserved 70 percent jobs for the locals in all industrial and hydro-electric projects.

In Delhi yesterday, Chief Minister Prem Kumar Dhumal met Union Minister of State for Power, Jairam Ramesh, and asked to ensure the jobs to Himachalis, besides initiating a process to grant Himachal's legitimate share in BBMP projects.

10. **Himachal, jobs for locals**
**(Baldev S Chauhan/ New Delhi Shimla, Business Standard- March 17, 2006)**

While the State Government's new industrial policy makes it mandatory for all industrial units being set up in the state to provide 70 percent of the jobs to locals, the Confederation of Indian Industry (CII) says this is hard to implement.

State Industries Minister Kuldeep Kumar said the Industry needed to adopt a far more sensitive and generous attitude towards locals and train them patiently for the required jobs. "There are very few job opportunities for the locals in the government and the agriculture sector. So Industry, growing at 17 per cent in the state, is the only place which can absorb them." Kaumar said.

**11. SIKKIM: Bill seeking 80 percent reservation for locals still in Sikkim**
**(By Barun Roy-THE HINDU February 8, 2009)**

Sikkim: Promotion of Local Employment Bill (**Bill No 9 of 2008).** A bill seeking 80 percent employments for locals is still pending with Presindent Prathibha Patil after the fromer governor of state effered it to her.

Seeking to reserve 80 percent employemnet for the local people during another session of the assembly and got it passed unanimously by a voice vote.

To reserve 80 percent jobs strictly for locals having Sikkim Subject Certificate or Certificate of Identification.

**12. Give jobs locals, take incentives: Bengal Govt.**
**(Indian Express Jul 8, 2011)**

OFFERING a carrot, but conditions apply. The Left government in West Bengal has announced a new incentive policy for investors, linking it to jobs for locals. The policy, for which a notification was issued on Thursday, says incentives would be given ot investors who employ people from the state.

``While 50 percent of IPA will be given on the basis of number of people the entrepreneur employs. But these employees will have to be resdents of West Bengal"

**13. Kashmir to move bill on district jobs for locals (Mar 20, 2010)**



Jammu and Kashmir Law and Parliamentary Affairs Minister Ali Mohammad Sagar Saturday told the State Assembly that a bill banning inter-district recruitment in the state will be introduced Moday.

``We will not allow our Youths to suffer because of the reservation of jobs for the outsiders…. the district posts should be filled by candidates from the district concerned only," NC legislator Kafil-ur-Rehman said before joining a sit-in the well of the house.

**14. Gujrath Government Reserves 85% To Locals March 9th, 2011**

As per the industries department's rule , those units availing incentives given by Gujarth government have to provid 85% employment to locals.

**15. Madhya Pradesh's new industrial policy (Shashikant Trivedi October 20, 2010)**

Madhya Pradesh government today announced its long awaited industry policy. It makes it mandatory for upcoming industries to reserve 50 percent direct job to locals. It took almost two years for the state machinery to frame rules and regulations that make the policy an overhauled version over the existing one. The new policy known as industrial Promotion Policy 2010 will be notified within thirty days from November 1.

"The policy offers incentives, grants and sops to the investment provided they offer jobs to people," said Industry Minister Kailash Vijayvergiya. Some of the

provisions of the policy are unlikely to fetch any result as they seem hypothetical. "Those who will investment of less than Rs.25 crore but provide direct jobs to 1000 locals will be considered as mega investment and will offered sops and concessions accordingly," the minister said. At present an investment is considered under mega category if its is Rs.25 crore or more.

In a 1961 case in Madhya Pradesh, the High Court ruled that administrative directives could not be questioned under the equality clause of the constitutions.

**16. Lalu wants 80% quota for locals in Bihar Government jobs**

RJD Boss seeks to reserve at least 80% seats for locals, irrespective of caste, in all categories of government jobs, Lalu says Bihar Government should immediately make a necessary change in its quota policy and other related laws.

*(INDIA TODAY - JULY 29, 2016)*

**17. Nitish supports Lalu's demand quota for local youth in govt. jobs**

**(THE HINDU July 30, 2016)**

Bihar chief minister Nitish Kumar on Friday supported the demand of his alliance partner, Rashtriya Janata Dal chief Lalu Prasad, for reservation in government jobs for local youth and said the demand was "not out of context". Mr Kumar also added that the Centre should



intervene in the issue and make some concrete arrangement.

"The issue of domicile is not out of context…demand for reservation of local youths in government jobs is picking momentum in different parts of the country as well and hence the Centre should intervene to make out some concrete arrangement for protecting the interest of the locals," Mr. Kumar said.

During his recent visit to the neighboring state of Jharkhand, Mr. Kumar had supported the people there in their demand for reservation of local youth in government jobs. "I and my party are very much in favour that residents of Bihar too should get preference in employment in state jobs… we're thinking of a domicile policy," he said, adding that there was also a need for a "detailed discussion on the issue" and if all the parties arrived at a consensus, "steps should be taken in this direction."

**18. Andhra Assembly to protect jobs for locals in Hyderabad –** Mar 17, 2010

Hyderabad, March 17 (Coal Geology) The Andhra Pradesh assembly will Thursday pass a resolution urging the government to bring an amendment to the presidential Order to project jobs for the Telangana people in Hydrabad

At an all-party meet convened Wednesday evening to discuss the Supreme Court's refusal to review its order declaring Hyderabad a 'free zone' for

recruitments in government jobs, the Congress government agreed to bring the resolution.

Leaders of all the parties were unanimous that the relevant paragraph of the Presidential Order relating to jobs for locals in Hyderabad should be amended to set aside the court order.

**19. Subsidy-Linked Jobs for Locals-** The Navhind Times July 25, 2012

Chief Minister Manohar Parriker told the House that he was willing to go beyond the provisions of the industrial policy of providing employment to locals. To achive this industrial dept has framed 'Goa State Employment Subsidy Scheme for Industries – 2008'.

**20. 80 % job reservation to locals if voted to power: Goa Forward**

PTI | May 31, 2016

**PANAJI:** The newly-formed Goa Forward Party has promised 80 per cent job reservation to locals in the private sector if voted to power in the 2017 Goa Assembly polls. The promise was made at the party's first-ever youth convention. "Goa Forward's prime agenda will be implementation of the policy of 80 % job reservation to Goans in private sector and cent per cent in public sector. This provision will be strictly implemented by forming watch- dog committees of **youth," Goa Forward President Prabhakar Timblo said.**



**21. TRS demands 80% jobs locals in Telagana region. Mar 29, 2010**

Hyderabad: Following the footsteps of Maharashtra Navnirman Sena (MNS), the TRS has decided to launch an agitation demanding 80 persent jobs to local in private and corporate sectors in the Telangana region.

TRS politburo member and former MP B Vinod Kumar said the party was conducting a survey to find out the percentage of jobs offered to Telangana people in every private company owned by industrialists belonging to non-T region or other states.

Alleging that the private companies are giving priority to people from other regions, he said after getting a detailed report, TRS will write letters to all such managements asking them to provide jobs to locals. If they do not fall in line, TRS will orgnise "gate crash agitations" and force them to shut units.

The TRS also demanded the government to bring changes in the industrial policy, to be unveiled in April first week, facilitating more employment opportunities to local people in private sector. The TRS was demanding jobs to people based on their "origin

**22. 100% job quota for locals sought In Assam**

**The Assam Tribune - Nov 21, 2008)**

The asom Jatiyatabadi Yuba Chatra Parishad (AJYCP) has on Friday demanded cent percent job reservation

for locals in all Central, semi-Central and private organizations in the State.

*Trivedi Says: March 10th, 2011*

Although government statistics showed industries are voluntarily proving more than 80 per cent jobs to local's youths.

Law enforcing state agencies should shed away the inhabitaion and make a pressing demand for jobs and contracts to local first and then outsiders. Please see it the case in Assam. They had ultimately take up arms in their hand and ultimately it gave rise to militant organization like ULFA. Had the local govt. corrected it in the beginning than this thing would not have started? In fact in this case it is a crime as the company in question is evading the law.

**23. Why Not State-Wise Reservation of Jobs?**

*Sulekha.com (23 October 2008).*

If one were to remember the early period of 1970s, the chhatra Parishad, the yout wing of the Indian National Congress in West Bengal, then headed by the current cabinet minister Mr. Priy Ranjan Das Munshi, made similar claims and made the industrial working atmosphere in the State a vitiated one. The demand was the same. Employment for the locals not only in public organizations but also in the private sector. The demand and the agitation went to such an extent, that people from other states when transferred to West Bengal were hesitant to move and those who boldly ventured were humiliated not as a person, but as a person who had usurped the employment



opportunity of a local. It is anotherr thing that all these agitations have become a thing of the past till the same is revived again in Maharashtra now.

# ಅನುಬಂಧ–೨

**NO. 15/12/1984-GM**

## Government of India

Ministry of Finance,
Bureau of Public Enterprises

Public Enterprises Bhavan
CGO Complex Block No, Lodhi Road
New Delhi-3
Dated 8th March, 1984

## Office Memorandum

Subject: **Recruitment to Central Government undertakings through**

**Employment exchange-raising of limit from Rs 800 to 1250.**

***

The undersigned is directed to refer to this Ministry's O.M. No. BPE / GL-007 / 78 MAN 3(2) / 75-BPE-GM. | Dated 13th November, 1978 and to say that modification thereof, it has been decided that recruitment to posts in public enter prices carrying pay scales, the maximum of which does not exceed Rs 1250 per month, should henceforth be made only through Employment Services. This will be applicable to only those public sector enterprises where pay scales of post below the level of officers have been revised since 1982 and which are following industrial rates DA. These public sector

enterprises where the pay scale have not been revised since 1982 either because they are following Central Government DA pattern or for some other reason, the present ceiling limit of Rs 800 will continue to apply.

The Ministry of Steel and Mines etc. are requested to bring the forgoing to the notice of Public Enterprises under their administrative control for necessary action.

Sd-

**Y.P. KAPOOR**
Director (Management)



# ಅನುಬಂಧ–೩

**No. 14024/1/2016-Estt (D)**

## Government of India

Ministry of Personnel, Public Grievances and Pensions
(Department of Personnel and Training)

North Block, New Delhi - 110001
Dated the 13th June, 2016

## Office Memorandum

Subject: **Recruitment of Staff through Employment Exchanges, regarding.**

***

1. In continuation of this Department's Office Memorandum No. 14024/2/96-Estt. (D) dated 18th May, 1998 and further amended vide OM of even number dated 09th November, 2005 on the above noted subject wherein it has been prescribed that all vacancies to be filled on regular basis, except those which fall within the purview of UPSC/Staff Selection Commission, are to be notified in the local Employment Exchange/Central Employment Exchange as per the provisions of the Employment Exchange (Compulsory Notification of Vacancies) Act, 1959. In addition to the reporting of the vacancies to the local Employment Exchange/Central Employment Exchange, it has been stipulated that the vacancies should be given wide publicity on an all India basis. In this regard, it was advised that the advertisement should be placed in the Employment News/

Rozgar Samachar published by the Publication division of Ministry of Information & Broadcasting. Such recruitment notices are also to be displayed on the Office Notice Board.

2. It has been decided that in addition to the above procedure, advertisement of vacancies may also be placed at the National Career Service (NCS) Portal of Ministry of Labour & Employment, which has been developed primarily to connect the opportunities with the aspiration of youth.

3. These instructions shall be applicable to all services / posts. All Ministries / Departments are requested to bring these instructions to the notice of all concerned includint attached and subordinate offices.

**(Rajesh Sharma)**
Under Secretary to the Govt. of India
Tel. No. 23040340

# ಅನುಬಂಧ

## ಡಾ. ಸರೋಜಿನಿ ಮಹಿಷಿ ವರದಿಯ ಪುನರ್ ಪರಿಶೀಲನೆ

### (ವರದಿಯ ಸಮಗ್ರ ಅವಲೋಕನ – ವರ್ಗೀಕರಣ)

## ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಲಹೆಗಳು

೮. ರಾಜ್ಯ ಸರಕಾರಿ ವಲಯದ ಉದ್ಯಮಗಳಲ್ಲಿ ಉನ್ನತ ಮಟ್ಟದ ತಾಂತ್ರಿಕ ಅರ್ಹತೆಯುಳ್ಳ ಅಭ್ಯರ್ಥಿಗಳು ದೊರೆಯದೇ ಇರುವ ಹುದ್ದೆಗಳನ್ನು ಬಿಟ್ಟು ಇನ್ನುಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಬೇಕು, ಈ ನೀತಿಯ ಪರಿಪಾಲನೆ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಎಚ್ಚರ ವಹಿಸಬೇಕು.

೯. ಖಾಸಗಿ ಉದ್ಯಮಗಳು ರಾಜ್ಯ ಸರಕಾರದಿಂದ ನೆಲ, ಜಲ, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಪಡೆಯುತ್ತಿರುವುದರಿಂದ ಅವುಗಳ ಮೇಲೆ ಒತ್ತಡ ತರಲು ಸಾಧ್ಯವಿದೆ. ಉದ್ಯಮಗಳಲ್ಲಿ ಉನ್ನತಮಟ್ಟದ ಆಡಳಿತ ಹುದ್ದೆಗಳನ್ನು ಅವಶ್ಯವಿದ್ದಲ್ಲಿ ಬಿಟ್ಟು ಉಳಿದ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸುವಂತೆ ಕಡ್ಡಾಯ ಮಾಡಬೇಕು.

೧೦. ಮಾಜಿ ಸೈನಿಕರಿಗೆ ಹಾಗೂ ಪರಿಶಿಷ್ಟ ಜಾತಿ/ಬುಡಕಟ್ಟಿನವರಿಗೆ ಮೀಸಲಾಗಿರಿಸಿದ ಹುದ್ದೆಗಳಿಗೆ ಕನ್ನಡೇತರರು ಆಯ್ಕೆಯಾಗುವುದನ್ನು ತಡೆಗಟ್ಟಲು ರಾಜ್ಯ ಸರಕಾರದ ಇಲಾಖೆಗಳಲ್ಲಿ ಮತ್ತು ಎಲ್ಲಾ ಉದ್ಯಮಗಳಲ್ಲಿ ನೇಮಕಗೊಳ್ಳುವ ಅಭ್ಯರ್ಥಿಗಳಿಗೆ ಕನ್ನಡ ಭಾಷಾಜ್ಞಾನ ಅವಶ್ಯವೆಂಬ ನಿಯಮವನ್ನು ರೂಪಿಸಬೇಕು.

೧೧. ರಾಜ್ಯದಲ್ಲಿರುವ ಕೆಲವು ತಾಂತ್ರಿಕ ಮತ್ತು ಇತರ ತರಬೇತಿ ಕೇಂದ್ರಗಳಲ್ಲಿ ಪ್ರವೇಶ ಕೊಡುವಾಗ ಪರಪ್ರಾಂತ್ಯದ ಅಭ್ಯರ್ಥಿಗಳಿಗೆ ಆದ್ಯತೆ ಕೊಡುತ್ತಿರುವುದು ಮತ್ತು ಅದರಿಂದ ಅವರಿಗೆ ಉದ್ಯೋಗಾವಕಾಶ ದೊರೆತು ಕನ್ನಡಿಗರ ಉದ್ಯೋಗಾವಕಾಶಕ್ಕೆ ಧಕ್ಕೆ ಉಂಟಾಗುತ್ತಿರುವುದು ಸಮಿತಿ ಗಮನಕ್ಕೆ ಬಂದಿದೆ.

ಆದುದರಿಂದ ಈ ತರಬೇತಿ ಕೇಂದ್ರಗಳಲ್ಲಿ ಪ್ರವೇಶ ಕನ್ನಡಿಗರಿಗೆ ಮಾತ್ರ ಸೀಮಿತಗೊಳಿಸಬೇಕು. ಅನಿವಾರ್ಯ ಪ್ರಸಂಗಗಳಲ್ಲಿ ಪರಪ್ರಾಂತ್ಯದವರಿಗೆ ಪ್ರವೇಶ ಕೊಟ್ಟರೂ ಅದು ನೂರಕ್ಕೆ ೫ಕ್ಕಿಂತ ಹೆಚ್ಚಿರಬಾರದು.

೨೧ (ಅ) ಸರಕಾರ ಆದೇಶ ಸಂಖ್ಯೆ ಸಿಐ ೧೨೧ ಎಸ್. ಪಿಸಿ ೮೨, ದಿನಾಂಕ ೩೦ನೇ ಅಕ್ಟೋಬರ್ ೧೯೮೨ ಇದರಲ್ಲಿ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಗೆ ಆಕರ್ಷಣೆಯಾಗಿ ಪರಿಷ್ಕೃತ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ಘೋಷಿಸಿದೆ ಈ ಪ್ರೋತ್ಸಾಹ ರಿಯಾಯಿತಿ ಗಳನ್ನು ಕೊಡುವಾಗ ಕನ್ನಡಿಗರಿಗೆ ಆದ್ಯತೆ ಕೊಡುವಂತೆ ಆದೇಶಿಸ ಬೇಕು ಮತ್ತು ಸರಕಾರದ ನೆರವನ್ನು ಪಡೆದು ಸ್ಥಾಪಿಸಲಾಗುವ ಕೈಗಾರಿಕೆಗಳು ಕನ್ನಡಿಗರಿಗೇ ಉದ್ಯೋಗಾವಕಾಶವನ್ನು ಕೊಡಬೇಕೆಂಬ ಕರಾರನ್ನು ಹಾಕಬೇಕು.

೨೩. ಉದ್ಯಮಗಳ ಸ್ಥಾಪನೆಗಾಗಿ ಜಮೀನನ್ನು ಕಳೆದುಕೊಂಡವರಿಗೆ ಪರಿಹಾರ ದೊರೆಯುವಂತೆ ಮಾಡಲು ನಿಗದಿಪಡಿಸಿದ ಸಮಯದೊಳಗೆ ಉದ್ಯಮ ಗಳನ್ನು ಕಡ್ಡಾಯವಾಗಿ ಸ್ಥಾಪಿಸುವ ಮತ್ತು ಜಮೀನು ಕಳೆದುಕೊಂಡ ಪ್ರತಿ ಕುಟುಂಬಕ್ಕೆ ಸೇರಿದ ಕನಿಷ್ಟ ಒಬ್ಬ ಸದಸ್ಯರಿಗೆ ಉದ್ಯೋಗಾವಕಾಶವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಹೆಚ್ಚು ಪ್ರಮಾಣದಲ್ಲಿ ಭೂಮಿಯನ್ನು ಕಳೆದುಕೊಂಡವರಿಗೆ ಸಂದರ್ಭಕ್ಕೆ ಅನುಸಾರವಾಗಿ ಒಂದಕ್ಕಿಂತ ಹೆಚ್ಚು ಹುದ್ದೆಗಳನ್ನು ಒದಗಿಸತಕ್ಕದ್ದು.

೨೪. ನೂರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನೌಕರರು ಇರುವ ಖಾಸಗಿ ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿ ರಾಜ್ಯ ಸರಕಾರದ ಪ್ರತಿನಿಧಿಯನ್ನು ಸೇರಿಸುವಂತೆ ಉದ್ಯಮಿಗಳನ್ನು ಒತ್ತಾಯಿಸಬೇಕು.

೩೪. ಸರಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಡಿಪಿಎಆರ್ ೩೮ ಎಸ್‌ಸಿಆರ್ ೮೩ ದಿನಾಂಕ ೨೦ನೇ ಜುಲೈ ೧೯೮೩ ಇದರಂತೆ ಸಂದರ್ಶನ ಕಾಲದಲ್ಲಿ ಅಭ್ಯರ್ಥಿ ಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕನ್ನಡದಲ್ಲಿಯೇ ಪ್ರಶ್ನಿಸಿ ಉತ್ತರವನ್ನು ಪಡೆಯಬೇಕೆಂದಿರುವುದು. ಇದನ್ನು ತಿದ್ದುಪಡಿ ಮಾಡಿ ಕನ್ನಡದಲ್ಲೆಯೇ ಪ್ರಶ್ನಿಸಿ ಉತ್ತರ ಪಡೆಯುವ ವ್ಯವಸ್ಥೆ ಮಾಡಬೇಕು.



೩೬. ಸ್ಪರ್ಧಾತ್ಮಕ ಪರೀಕ್ಷೆ ಇಲ್ಲದೆ ಬರೀ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವ ಅಭ್ಯರ್ಥಿಗಳಿಗೆ ಲೋಕಸೇವಾ ಆಯೋಗವು ಕನ್ನಡ ಪರೀಕ್ಷೆಯನ್ನು ನಡೆಸಬೇಕು

೩೭. ಪರಿಶಿಷ್ಟ ಜಾತಿ ಬುಡಕಟ್ಟಿಗೆ ಸೇರಿದ ಅಭ್ಯರ್ಥಿಗಳ ಕೊರತೆಯನ್ನು ನೀಗಿಸಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕು.

೧. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಅಭ್ಯರ್ಥಿಗಳು ದೊರೆಯದೆ ಇದ್ದರೆ ವೃತ್ತಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವುದರ ಮೂಲಕ, ಪರಿಶಿಷ್ಟ ಜಾತಿ ಬುಡಕಟ್ಟಿನವರ ಕಲ್ಯಾಣ ಇಲಾಖೆಯ ಗಮನಕ್ಕೆ ತರುವುದರ ಮೂಲಕ ಮತ್ತು ಆಕಾಶವಾಣಿ ದೂರದರ್ಶನಗಳಲ್ಲಿ ಪ್ರಕಟಿಸುವುದರ ಮೂಲಕ ಅಭ್ಯರ್ಥಿಗಳನ್ನು ಪಡೆಯುವ ಪ್ರಯತ್ನ ಮಾಡಬೇಕು.

೨. ಎಲ್ಲಾ ಇಲಾಖೆ ಉದ್ಯಮಗಳಲ್ಲಿರುವ ನೇಮಕಾತಿ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ ಬುಡಕಟ್ಟಿನವರ ಕಲ್ಯಾಣ ಇಲಾಖೆಯ ಪ್ರತಿನಿಧಿಯನ್ನು ಸೇರಿಸಬೇಕು.

೩. ಈ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದೆ ಇದ್ದಾಗ ಪರಿಶಿಷ್ಟ ಜಾತಿ ಬುಡಕಟ್ಟಿನವರ ಕಲ್ಯಾಣ ನಿರ್ದೇಶಕರನ್ನು ಸಂಪರ್ಕಿಸುವಂತೆ ಉದ್ಯಮಗಳಿಗೆ ಸ್ಥಾಯಿ ಆದೇಶವನ್ನು ಕೊಡಬೇಕು.

ಇಲಾಖೆಯು ಜಾಹೀರಾತುಗಳನ್ನು ಗಮನಿಸಿ ಇಲಾಖೆಯಲ್ಲಿ ಹೆಸರು ನೋಂದಾಯಿಸಿದ ಸೂಕ್ತ ಅರ್ಹತೆಯಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸುವಂತೆ ಮಾರ್ಗದರ್ಶನ ನೀಡಬೇಕು.

೪೦. ರಾಜ್ಯದಲ್ಲಿರುವ ಉದ್ಯಮಗಳಿಗೆ ಬೇಕಾಗಿರುವ ವಿಶೇಷ ತಾಂತ್ರಿಕ ತರಬೇತಿ ಪಡೆಯಲು ಉದ್ಯೋಗ ತರಬೇತಿ ಕೇಂದ್ರಗಳಲ್ಲಿ (ಐಟಿಐ) ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅವಕಾಶ ಮಾಡಿದರೆ ಹೊರ ರಾಜ್ಯ ದಿಂದ ಈ ವಿಶೇಷ ತರಬೇತಿ ಪಡೆದ ಅಭ್ಯರ್ಥಿಗಳನ್ನು ಕರೆಯಿಸಿ ಕೊಳ್ಳುವ ಅವಶ್ಯಕತೆಯಿರುವುದಿಲ್ಲ. ಸಮಿತಿಯು ಉದ್ಯಮಗಳಿಗೆ ಭೇಟಿಕೊಟ್ಟಾಗ ಇಂತಹ ತಾಂತ್ರಿಕ ವಿಷಯಗಳನ್ನು ಗುರುತಿಸಿ ಅವುಗಳ ಪಟ್ಟಿಯನ್ನು ಸಂಗ್ರಹಿಸಿ ಕೊಟ್ಟಿರುವುದು. ಈ ಬಗ್ಗೆ ಸರಕಾರವು ಸೂಕ್ತ ವ್ಯವಸ್ಥೆ ಮಾಡಬೇಕು.

೪೭.. ರಾಜ್ಯದ ಮುಖ್ಯ ನಗರಗಳಲ್ಲಿ ನಿವೇಶನಗಳನ್ನು ಕನ್ನಡಿಗರಿಗೆ ಆದ್ಯತೆ ಮೇಲೆ ಹಂಚುವಂತೆ ಈ ಕೆಳಗಿನ ನಿಯಮಗಳನ್ನು ರೂಪಿಸಬೇಕು.

೧. ಅರ್ಜಿ ಹಾಕಲು ಅರ್ಹತೆ ಪಡೆಯಬೇಕಾದರೆ ೧೫ವರ್ಷ ರಾಜ್ಯದಲ್ಲಿ ವಾಸವಾಗಿದ್ದಿರಬೇಕು ಮತ್ತು ಕನ್ನಡ ಭಾಷಾಜ್ಞಾನ ಇರಬೇಕು.

೨. ವಾಸವಾಗಿದ್ದುದನ್ನು ರುಜುವಾತುಪಡಿಸಲು ಶಾಲೆಯ ಸರ್ಟಿಫಿಕೇಟ್ ಪಡಿತರಚೀಟಿ ಮತದಾರರ ಪಟ್ಟಿ ಮತ್ತು ಜನ್ಮ ದಾಖಲೆ ಇವಿಷ್ಟನ್ನು ಒದಗಿಸಬೇಕು.

೩. ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರವವರು ಮತ್ತು ಉದ್ಯೋಗಕ್ಕಾಗಿ ಅಥವಾ ಉನ್ನತ ಶಿಕ್ಷಣಕ್ಕಾಗಿ ಹೊರ ರಾಜ್ಯಕ್ಕೆ ಹೋದವರು ಹೊರತು ಇನ್ನಾರಿಗೂ ೧೫ವರ್ಷಗಳ ವಾಸ ನಿಯಮದಿಂದ ರಿಯಾಯಿತಿ ಕೊಡಬೇಕಿಲ್ಲ.

೪. ಖಾಸಗಿ ಬಡಾವಣೆಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿಯಮಗಳನ್ನು ಪಾಲಿಸುವಂತೆ ಮತ್ತು ನಿವೇಶನ ಹಂಚುವ ಮೊದಲು ಪ್ರಾಧಿಕಾರದ ಅನುಮೋದನೆ ಪಡೆಯುವಂತೆ ಆದೇಶಸಬೇಕು. ಗೃಹ ನಿರ್ಮಾಣ ಸಹಕಾರಿ ಸಂಘಗಳು ಸಹ ಪ್ರಾಧಿಕಾರದ ನೀತಿಯನ್ನು ಅನುಸರಿಸುವುದಲ್ಲದೆ, ಪ್ರಾಧಿಕಾರದ ಅನುಮೋದನೆಯನ್ನು ಪಡೆಯು ವಂತೆ ಆದೇಶಿಸಬೇಕು.

೫೫. ವಿಧಾನ ಮಂಡಲದಲ್ಲಿ ಒಂದು ಸಾರ್ವಜನಿಕ ಉದ್ಯಮಗಳ ಸಮಿತಿ ಇದ್ದು ಆ ಸಮಿತಿಯು ಅದರ ಅಧಿಕಾರ ವ್ಯಾಪ್ತಿಯೊಳಗೆ ಬರುವ ಹಲವು ನಿಗಮ/ಮಂಡಳಿ/ಕಂಪನಿಗಳ ಲೆಕ್ಕಪತ್ರ, ಕಾರ್ಯದಕ್ಷತೆ–ಇತ್ಯಾದಿ ವಿಷಯಗಳನ್ನು ಪರಿಶೀಲಿಸುವುದು. ಈ ಕಾರ್ಯದೊಂದಿಗೆ ಸಮಿತಿಯು ಕನ್ನಡಿಗರಿಗೆ ಸೂಕ್ತ ಪ್ರಮಾಣದ ಉದ್ಯೋಗಾವಕಾಶ ದೊರೆಯುತ್ತಿರುವುದೇ ಎಂಬ ವಿಷಯವನ್ನು ಸಹ ಪರಿಶೀಲಿಸಿದರೆ ಇದರಿಂದ ಉದ್ಯಮಗಳ ಆಡಳಿತ ವರ್ಗದ ಮೇಲೆ ತೀವ್ರವಾದ ಪರಿಣಾಮ ಉಂಟಾಗುವುದು ನಿಸ್ಸಂದೇಹ. ಈ ಪರಿಶೀಲನೆಗೆ ಅವಕಾಶವಾಗುವಂತೆ ಸಮಿತಿಯ ಕಾರ್ಯವಿಧಾನಕ್ಕೆ ಸಂಬಂಧಪಟ್ಟ ನಿಯಮಗಳಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಬೇಕು

೫೭. ಎಂಪ್ಲಾಯ್‌ಮೆಂಟ್ ನ್ಯೂಸ್ ಈ ಪತ್ರಿಕೆಯ ಮಾದರಿಯಲ್ಲಿ ರಾಜ್ಯ ಸರಕಾರವು ಒಂದು ಪತ್ರಿಕೆಯನ್ನು ಪ್ರಕಟಿಸಬೇಕು.

## ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಬೇಕಿರುವ ಅಂಶಗಳು

೧. ರಾಷ್ಟ್ರೀಯ ಐಕ್ಯತಾ ಪರಿಷತ್ತಿನಿಂದ ರಚಿಸಲಾದ ಉಪ ಸಮಿತಿಯೊಂದು ಸರಕಾರಿ ಮತ್ತು ಖಾಸಗಿ ವಲಯಗಳ ಉದ್ಯಮಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ದೊರೆಯುತ್ತಿರುವ ಉದ್ಯೋಗಾವಕಾಶದ ಬಗ್ಗೆ ಪರಿಶೀಲನೆ ನಡೆಸಿತ್ತು. ಈ ಉಪ ಸಮತಿಯು ರಾಜ್ಯಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಉದ್ಯೋಗಾವಕಾಶ ದೊರೆಯದೆ ಇದ್ದುದರಿಂದ ಉಂಟಾದ ಅತೃಪ್ತಿಯನ್ನು ಗಮನಿಸಿ ಅರ್ಹತೆಯುಳ್ಳ ಸ್ಥಳೀಯ ಅಭ್ಯರ್ಥಿಗಳು ಲಭ್ಯವಿರುವಾಗ ಉದ್ಯೋಗಾವಕಾಶದಲ್ಲಿ ಅವರಿಗೆ ಹೆಚ್ಚಿನ ಭಾಗ ದೊರೆಕಿಸುವಂತೆ ಶಿಫಾರಸು ಮಾಡಿರುವುದು. ಈ ಶಿಫಾರಸನ್ನು ರಾಷ್ಟ್ರೀಯ ಐಕ್ಯತಾ ಪರಿಷತ್ತು ಅದರ ದಿನಾಂಕ:೨೨ನೇ ಜೂನ್ ೧೯೬೮ರಂದು ನಡೆದ ಸಭೆಯಲ್ಲಿ ಅಂಗೀಕರಿಸಿತು, ಈ ಶಿಫಾರಸಿನ ಮೇಲೆ ಕೇಂದ್ರ ಸರ್ಕಾರವು ಯಾವ ಕ್ರಮವನ್ನು ತೆಗೆದುಕೊಂಡಂತೆ ಕಾಣುವುದಿಲ್ಲ, ಡಾ. ಸರೋಜಿನಿ ಮಹಿಷಿ ಸಮಿತಿಯು ಮಾಡುವ ಶಿಫಾರಸುಗಳು, ಪರಿಷತ್ತಿನ ಶಿಫಾರಸುಗಳಿಗೆ ಅನುಗುಣವಾಗಿರುವುವು, ಆದುದರಿಂದ ಡಾ. ಸರೋಜಿನಿ ಮಹಿಷಿ ಸಮಿತಿಯ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದರ ಮೂಲಕ ರಾಷ್ಟ್ರೀಯ ಐಕ್ಯತಾ ಪರಿಷತ್ತಿನ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರುವಂತೆ ರಾಜ್ಯ ಸರ್ಕಾರವು ನೋಡಿಕೊಳ್ಳಬೇಕು ಹಾಗೂ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕು.

೨. ಕೇಂದ್ರ ಸರಕಾರದ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಸಂಸ್ಥೆಯು ಸರಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿ ರೂ. ೧,೨೫೦ ರವರೆಗೆ

ಇರುವ ಎಲ್ಲಾ ಹುದ್ದೆಗಳಿಗೆ ನ್ಯಾಷನಲ್ ಎಂಪ್ಲಾಯ್‌ಮೆಂಟ್ ಸರ್ವಿಸಸ್ ಮೂಲಕ ಅಭ್ಯರ್ಥಿಗಳನ್ನು ನೇಮಕ ಮಾಡಬೇಕೆಂದು ಆದೇಶಿಸಿದೆ, ಮೇಲ್ಮಟ್ಟದ ಹುದ್ದೆಗಳಿಗೆ ಕೆಲವೆಡೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪದ್ದತಿ ಇದೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಾವಣೆ ಮಾಡುವ ಅವಶ್ಯಕತೆಯೂ ಇದೆ, ಆದರೆ ಗ್ರೂಪ್ ಡಿ ಹುದ್ದೆಗಳಿಗೆ ಹೊರ ರಾಜ್ಯದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಉಚಿತವಲ್ಲ, ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಿನಾಂಕ: ೨೩ನೇ ಜುಲೈ ೧೯೮೧ಕ್ಕಿಂತ ಹಿಂದೆ ಕನ್ನಡೇತರರ ಹೆಸರುಗಳನ್ನು ನೋಂದಾಯಿಸಲಾಗಿದೆ, ಇವೆಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರಕಾರಿ ವಲಯದ ಉದ್ಯಮಗಳಲ್ಲಿ ಕನ್ನಡಿಗರಿಗೆ ಸಲ್ಲತಕ್ಕ ಉದ್ಯೋಗ ಪ್ರಮಾಣ ಈ ಕೆಳಗಿನಂತಿರಬೇಕೆಂದು ಸಮಿತಿ ಶಿಫಾರಸು ಮಾಡುವುದು:

* ನಾಲ್ಕನೆಯ ವರ್ಗದ (ಗ್ರೂಪ್ ಡಿ) ಹುದ್ದೆಗಳಲ್ಲಿ ...ಶೇ ೧೦೦ ವೇತನ
* ಶ್ರೇಣಿ ರೂ.೧,೨೫೦ರ ತನಕ ಇರುವ ಇತರ ಹುದ್ದೆಗಳಲ್ಲಿ ...ಶೇ ೮೦
* ಉಳಿದ ಮೇಲ್ಮಟ್ಟದ ನೇರ ನೇಮಕಾತಿ ಆಧಾರದ ಮೇಲೆ ಭರ್ತಿ ಮಾಡುವ ಹುದ್ದೆಗಳಲ್ಲಿ ...ಶೇ ೬೫.

೧೪. ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ ಅಥವಾ ಪದವೀ ಪರೀಕ್ಷೆ ಪಾಸಾದ ಅಭ್ಯರ್ಥಿಗಳು ಮಾತ್ರ ರಾಜ್ಯದಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳಿಗೆ ನೇಮಕವಾಗಲು ಅರ್ಹರು ಎಂಬುದಾಗಿ ಪರಿಗಣಿಸುವಂತೆ ಬ್ಯಾಂಕು ನೇಮಕಾತಿ ಮಂಡಳಿಗಳಿಗೆ ಸೂಚಿಸಬೇಕು ಈ ಮಂಡಳಿಗಳ ಜಾಹೀರಾತುಗಳನ್ನು ಕನಿಷ್ಠ ಒಂದು ರಾಜ್ಯ ಮಟ್ಟ ಕನ್ನಡ ಪತ್ರಿಕೆಯಲ್ಲಿ ಪ್ರಕಟಿಸಬೇಕು.

೧೭. ಬ್ಯಾಂಕುಗಳಲ್ಲಿ ಕನ್ನಡ ಬಳಕೆಯ ನಾಗರಿಕರ ಅನುಕೂಲತೆಯ ದೃಷ್ಟಿಯಿಂದಲೂ ಕನ್ನಡಿಗರ ನೇಮಕದ ದೃಷ್ಟಿಯಿಂದಲೂ ಇದು ಅವಶ್ಯ ಆದುದರಿಂದ ರಾಜ್ಯದಲ್ಲಿರುವ ಎಲ್ಲಾ ಬ್ಯಾಂಕುಗಳ ಶಾಖೆಗಳು ಕನ್ನಡದಲ್ಲಿಯೇ ವ್ಯವಹರಿಸುವಂತೆ ಒತ್ತಾಯ ಮಾಡಬೇಕು.

೧೮. ರಾಜ್ಯದಲ್ಲಿ ಬ್ಯಾಂಕುಗಳ ನೇಮಕಾತಿ ಮಂಡಳಿಗಳನ್ನು ರಚಿಸುವಾಗ ಕೇಂದ್ರ



ಸರಕಾರವು ರಾಜ್ಯ ಸರಕಾರವನ್ನು ಸಂಪರ್ಕಿಸುವಂತೆಯೂ ಮತ್ತು ಈ ಮಂಡಳಿಗಳ ಸದಸ್ಯರುಗಳಲ್ಲಿ ರಾಜ್ಯ ಸರಕಾರದ ಪ್ರತಿನಿಧಿಯನ್ನು ಸೇರಿಸಿ ಬಹು ಸಂಖ್ಯೆಯಲ್ಲಿ ಕನ್ನಡಿಗರನ್ನು ಸೇರಿಸುವಂತೆ ಕೇಂದ್ರ ಸರಕಾರವನ್ನು ರಾಜ್ಯ ಸರಕಾರವು ಒತ್ತಾಯಿಸಬೇಕು.

೨೨. ಹಿಂದೆ ಕೇಂದ್ರ ಸರಕಾರವು (ಸಂವಿಧಾನದ ಅನುಚ್ಛೇದ ೧೬ರ ಉಪವ್ಯಾಕ್ಯ (೩)ರ ಆಧಾರದ ಮೇಲೆ "The Public Employment (Requrirement as to Residence) Act ೧೯೫೭ ಎಂಬ ಕಾಯಿದೆಯನ್ನು ರಚಿಸಿತ್ತು. ಇದರಂತೆ ಕಾಯಿದೆ ಅನ್ವಯಿಸುವ ಆಂಧ್ರಪ್ರದೇಶ ಇತ್ಯಾದಿ ರಾಜ್ಯಗಳಲ್ಲಿ ಕೆಲವು ಹುದೆಗಳಿಗೆ ನೇಮಕ ಮಾಡಲ್ಪಡುವ ಅಭ್ಯರ್ಥಿಗಳು ಆಯಾಯಾ ರಾಜ್ಯಗಳಲ್ಲಿ ವಾಸವಾಗಿದ್ದಿರ ಬೇಕೆಂಬ ನಿಯಮಗಳನ್ನು ರಚಿಸಲು ಕೇಂದ್ರ ಸರಕಾರಕ್ಕೆ ಅಧಿಕಾರವನ್ನು ಕೊಡಲಾಗಿತ್ತು. ಈಗ ಕರ್ನಾಟಕದ ಪರವಾಗಿ ಇದೇ ರೀತಿಯ ಕಾಯಿದೆಯನ್ನು ರಚಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕು. ಈ ಕಾಯಿದೆಯ ಕಾಲಾವಧಿ ಪ್ರಥಮ ಹಂತದಲ್ಲಿ ೧೦ ವರ್ಷಗಳಾಗಿರಬೇಕು.

೫೪. ಲೋಕಸೇವಾ ಆಯೋಗ ಹಾಗೂ ನೇಮಕಾತಿ ಸಮಿತಿಗಳು ಜಾಹೀರಾತುಗಳನ್ನು ಕರ್ನಾಟಕದಲ್ಲಿ ಮುದ್ರಣವಾಗುವ ಪತ್ರಿಕೆಗಳಿಗೆ ಮಾತ್ರ ಪ್ರಕಟಿಸಲು ಕೊಡಬೇಕು.

## ಈಗಾಗಲೇ ಅನುಷ್ಠಾನವಾಗಿರುವ ಅಂಶಗಳು

೨೫. ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿರುವ ರಾಜ್ಯ ಸರಕಾರದ ಪ್ರತಿನಿಧಿಗಳು ಈ ಸಮಿತಿಗಳ ನಡವಳಿಕೆಗಳ ಬಗ್ಗೆ ಸರಕಾರಕ್ಕೆ ವರದಿಗಳನ್ನು ಕಳುಹಿಸುವಂತೆಯೂ ಈ ವರದಿಗಳ ಪರಿಶೀಲನೆಗೆ ಒಂದು ಘಟಕವನ್ನು ರಚಿಸುವಂತೆಯೂ ವ್ಯವಸ್ಥೆ ಮಾಡಬೇಕು. ಈ ಘಟಕಕ್ಕೆ ಶಾಸನಬದ್ಧ ಅಂತಸ್ತು ದೊರೆಯುವಂತೆ ಮಾಡುವ ವ್ಯವಸ್ಥೆ ಮಾಡಬೇಕು. ಅವಶ್ಯವಿದ್ದರೆ ವಿಭಾಗ ಮಟ್ಟದಲ್ಲಿ ಸಹ ಈ ಘಟಕಗಳ ಶಾಖೆಗಳು ಪರಿಶೀಲನೆ ನಡೆಸುವಂತೆ ಮಾಡಬಹುದು.

೨೮. ಮಹಾರಾಷ್ಟ್ರದಲ್ಲಿರುವ ಪದ್ಧತಿಯಂತೆ ಉದ್ಯಮಗಳಿಂದ ಕನ್ನಡಿಗರಿಗೆ ನಿಗದಿಪಡಿಸಿದ ಪ್ರಮಾಣದಲ್ಲಿ ಉದ್ಯೋಗವಕಾಶವನ್ನು ಒದಗಿಸುವ ಬಗ್ಗೆ ಪ್ರತಿ ವರ್ಷ ಘೋಷಣೆ ಪ್ರಪತ್ರವನ್ನು (ಡಿಕ್ಲೆರೇಷನ್) ಪಡೆಯಬೇಕು. ಈ ಪ್ರಪತ್ರವನ್ನು ಪಡೆಯುವ ಮತ್ತು ಪರಿಶೀಲಿಸುವ ಜವಾಬ್ದಾರಿಕೆಯನ್ನು ಕ್ರಮಸಂಖ್ಯೆ ೨೫ನೇ ಶಿಫಾರಸಿನಲ್ಲಿ ಸೂಚಿಸಿರುವ ಘಟಕಕ್ಕೆ ವಹಿಸಿ ಕೊಡಬೇಕು.

೩೫. ಅಭ್ಯರ್ಥಿಗಳ ಆಯ್ಕೆಗಾಗಿ ಲೋಕಸೇವಾ ಆಯೋಗ ಅಥವಾ ಇತರ ನೇಮಕಾತಿ ಸಮಿತಿಗಳು ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು ಕನ್ನಡ ಪ್ರಶ್ನೆ ಪತಿಕೆಯನ್ನು ಕಡ್ಡಾಯವಾಗಿ ಸೇರಿಸಬೇಕು. ಈ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ ಉತ್ತೀರ್ಣರಾಗದೆ ಇರುವವರು ಆಯ್ಕೆಗೆ ಅನರ್ಹರಾಗುವಂತೆ ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕು.

೩೮. ನೀರಾವರಿ ಯೋಜನೆಗಳಲ್ಲಿ ಭಾರಿ ಕಾಮಗಾರಿಗಳಿಗೆ ಗುತ್ತಿಗೆ ಕೊಡುವಾಗ ಕನ್ನಡಿಗರಿಗೆ ಆದ್ಯತೆ ಕೊಡಬೇಕು. ಗುತ್ತಿಗೆ ಕೊಡುವಾಗ ಕನ್ನಡಿಗರನ್ನೇ ಕೆಲಸಗಾರರನ್ನಾಗಿ ನೇಮಕ ಮಾಡಬೇಕೆಂಬ ಶರತ್ತನ್ನು ಒಪ್ಪಂದದಲ್ಲಿ ಸೇರಿಸಬೇಕು.

೩೯. ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಹಿಡುವಳಿದಾರರು ತಮ್ಮ ಜಮೀನನ್ನು ಹೊರ ರಾಜ್ಯದವರಿಗೆ ವಿಕ್ರಯಿಸಿ ಈ ಯೋಜನೆಗಳ ಲಾಭವನ್ನು ಕಳೆದುಕೊಳ್ಳುವರು. ಇದನ್ನು ತಡೆಗಟ್ಟಲು ಜಮೀನನ್ನು ಪರಭಾರೆ ಮಾಡುವುದನ್ನು ನಿಯಂತ್ರಣಗೊಳಿಸಬೇಕು. ಈ ಬಗ್ಗೆ ಮಹಾರಾಷ್ಟ್ರದಲ್ಲಿ ಜಾರಿಯಲ್ಲಿರುವ `The Maharashtra Resettlement of Project Displaced Persons Act 1976', ಇದರ ಮಾದರಿಯನ್ನು ಅನುಸರಿಸ ಬಹುದು, ಎರಡನೆಯದಾಗಿ ಸರಕಾರ ಅಚ್ಚುಕಟ್ಟು ಪ್ರದೇಶದಲ್ಲಿರುವ ಸಣ್ಣ ಹಿಡುವಳಿದಾರರಿಗೆ ಸಹಾಯ ಮಾಡುವ ವ್ಯವಸ್ಥೆ ಮಾಡಬೇಕು.

೪೩. ರೈಲ್ವೆ ನೇಮಕಾತಿ ಮಂಡಳಿಯಲ್ಲಿ ಕರ್ನಾಟಕದ ಗಣ್ಯ ವ್ಯಕ್ತಿಗಳನ್ನು ಸದಸ್ಯರನ್ನಾಗಿ ನೇಮಕ ಮಾಡುವ ವ್ಯವಸ್ಥೆ ಮಾಡಬೇಕು. ಮಂಡಳಿಯು ನಡೆಸುವ ನೇಮಕಾತಿಯಲ್ಲಿ ಕನ್ನಡ ಭಾಷಾಜ್ಞಾನ ಅವಶ್ಯವೆಂದು ಪರಿಗಣಿಸಿ ಕನ್ನಡ ಭಾಷಾಜ್ಞಾನವನ್ನು ಪರೀಕ್ಷಿಸಬೇಕು. ತೆಗೆದು ಹಾಕಲ್ಪಟ್ಟ (ರಿಟ್ರೆಂಚ್ಡ್) ದಿನಗೂಲಿ ನೌಕರರನ್ನು ಪುನ: ನೇಮಕ ಮಾಡುವಾಗ ಆಯಾ ಭಾಷಾ ಪ್ರಾಂತ್ಯದಲ್ಲಿ ಮಾತ್ರ ನೇಮಕ ಮಾಡಬೇಕು.

೪೪. ಹುಬ್ಬಳ್ಳಿ ರೈಲ್ವೆ ಡಿವಿಜನಿನಲ್ಲಿ ಸಾಂದರ್ಭಿಕ ಕೆಲಸಗಾರರ ಹುದ್ದೆಗಳಿಗೆ ಬಹಿರಂಗವಾಗಿ ಅರ್ಜಿಗಳನ್ನು ಆಹ್ವಾನಿಸುವುದು ಅಥವಾ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸಂಪರ್ಕಿಸುವುದು ಈ ಕ್ರಮಗಳನ್ನು ಕೈಗೊಳ್ಳದೆ ರೈಲ್ವೆ ಇನ್ಸ್‌ಪೆಕ್ಟರ್‌ರವರು ಯಾರಿಗೆ ಬೇಕಾದರೂ ಆಯ್ಕೆ ಮಾಡಬಹು ದಾಗಿದೆ. ಈ ಸಾಂದರ್ಭಿಕ ಕೆಲಸಗಾರರನ್ನು ಮುಂದೆ ಗ್ರೂಪ್ 'ಡಿ' ಹುದ್ದೆಗಳಿಗೆ ನೇಮಕ ಮಾಡುವುದರಿಂದ ಸಾಂದರ್ಭಿಕ ಕೆಲಸಗಾರರನ್ನು ಆಯ್ಕೆ ಮಾಡುವಾಗ ಉದ್ಯೋಗ ವಿನಿಮಯ ಕೇಂದ್ರದ ಮೂಲಕ ಅಥವಾ ಪತ್ರಿಕೆ, ಗ್ರಾಮಪಂಚಾಯಿತಿಗಳ ಮೂಲಕ ಪ್ರಕಟಣೆ ನೀಡುವ ವ್ಯವಸ್ಥೆ ಮಾಡಬೇಕು.

೪೫. ರೈಲ್ವೆಯಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವಿರುವ ಒಂದು ದಕ್ಷಿಣ ಪಶ್ಚಿಮ ವಲಯವನ್ನು ಸ್ಥಾಪಿಸಬೇಕೆಂಬ ಬೇಡಿಕೆ ಇದೆ. ಇದರಿಂದ ಕನ್ನಡಿಗರ ಉದ್ಯೋಗಾವಕಾಶ ಹಾಗೂ ಇತರ ಸೌಲಭ್ಯಗಳು ಹೆಚ್ಚಾಗುವ ಸಾಧ್ಯತೆಯಿರುವುದರಿಂದ ರಾಜ್ಯ ಸರಕಾರವು ಈ ಬೇಡಿಕೆಯನ್ನು ಪುಷ್ಟೀಕರಿಸಬೇಕು.

೪೬. ಒಂದು ಶತಮಾನದಿಂದ ಕಾರ್ಯ ನಡೆಸಿಕೊಂಡು ಬಂದಿರುವ ಹುಬ್ಬಳ್ಳಿ ರೈಲ್ವೆವರ್ಕ್‌ಷಾಪನ್ನು ರಾಜ್ಯದಿಂದ ಹೊರಗೆ ವರ್ಗಾಯಿಸಲು ನಡೆಯುತ್ತಿರುವ ಪ್ರಯತ್ನವನ್ನು ರಾಜ್ಯ ಸರಕಾರವು ವಿರೋಧಿಸಿ ನಿಲ್ಲಿಸಬೇಕು.

೪೯. ಕರ್ನಾಟಕ ರೈತರಿಗೆ ಸಹಾಯ ಮಾಡಲು ರಾಜ್ಯದಲ್ಲಿರುವ ನಬಾರ್ಡ್ ಸಂಸ್ಥೆಯಲ್ಲಿ ಕನ್ನಡಿಗರಿರ ಬೇಕಾಗಿರುವುದು ಸಹಜ. ಆದುದರಿಂದ ಈ ಸಂಸ್ಥೆಯ ಬೆಂಗಳೂರು ಶಾಖೆಗೆ ನೇಮಕಾತಿ ಮಾಡಲು ಬೆಂಗಳೂರಲ್ಲಿಯೇ ಒಂದು ನೇಮಕಾತಿ ಸಮಿತಿಯನ್ನು ರಚಿಸುವಂತೆ ಒತ್ತಾಯಿಸಬೇಕು.

೫೩. ಕರ್ನಾಟಕದಲ್ಲಿ ಸ್ಟಾಫ್ ಸೆಲೆಕ್ಷನ್ ಕಮಿಷನ್ ಆಫ್ ಇಂಡಿಯಾ– ಇದರ ಒಂದು ಶಾಖೆಯನ್ನು ತೆರೆಯುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು.

## ಕೈ ಬಿಡಬಹುದಾದ ಅಂಶಗಳು

೮. ದಿನಾಂಕ: ೨೩ನೇ ಜುಲೈ ೧೯೮೮ರ ತನಕ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಲು ಯಾವ ನಿರ್ಬಂಧನೆಯು ಇಲ್ಲದಿದ್ದುದರಿಂದ ಅನೇಕ ಕನ್ನಡೇತರ ಅಭ್ಯರ್ಥಿಗಳು ಹೆಸರು ನೋಂದಾಯಿಸಿರುವರು. ಉದ್ಯಮಗಳು ಜ್ಯೇಷ್ಠತೆಯ ಮೇಲೆ ಈ ಕನ್ನಡೇತರ ಅಭ್ಯರ್ಥಿಗಳ ಪಟ್ಟಿಯನ್ನು ಕಳುಹಿಸುವುವು ಮತ್ತು ಅವರೇ ಆಯ್ಕೆಗೊಂಡು ನೇಮಕ ಮಾಡಲ್ಪಡುವರು ಉದ್ಯೋಗ ವಿನಿಮಯ ಕೇಂದ್ರಗಳೊಡನೆ ಅಭ್ಯರ್ಥಿಗಳ ಪಟ್ಟಿಯನ್ನು ಕೇಳುವಾಗ ಕನ್ನಡ ಭಾಷಾಜ್ಞಾನವಿರುವ ಅಭ್ಯರ್ಥಿಗಳ ಹೆಸರನ್ನು ಮಾತ್ರ ಕಳುಹಿಸುವಂತೆ ಕೇಳಬೇಕೆಂಬ ಸಲಹೆಗೆ ಕೆಲವು ಪ್ರಮುಖವಾದ ಉದ್ಯಮಗಳು ಒಪ್ಪಿಕೊಂಡಿರುವುವು ಮತ್ತು ಇನ್ನೂ ಕೆಲವು ಉದ್ಯಮಗಳು ಈ ಸಲಹೆಯನ್ನು ಪರಿಶೀಲಿಸುವುದಾಗಿ ಒಪ್ಪಿಕೊಂಡಿರುವುವು ಆದುದರಿಂದ ಸರಕಾರಿ ಇಲಾಖೆಗಳು ಹಾಗೂ ಉದ್ಯಮಗಳು ಉದ್ಯೋಗ ವಿನಿಮಯ ಕೇಂದ್ರಗಳೊಡನೆ ಕನ್ನಡ ಭಾಷಾ ಜ್ಞಾನವಿರುವವರ ಪಟ್ಟಿಯನ್ನು ಕೇಳುವಂತೆಯೂ ಕೇಂದ್ರಗಳು ಅಂತಹವರ ಪಟ್ಟಿಯನ್ನು ಕಳುಹಿಸು ವಂತೆಯೂ ಆದೇಶಿಸಬೇಕು.

೨೬. ಉದ್ಯಮಗಳಲ್ಲಿ ನೌಕರರ ಮಕ್ಕಳಿಗೆ ಆದ್ಯತೆ ಮೇಲೆ ನೇಮಕ ಮಾಡುವುದ ರಿಂದ ಕನ್ನಡೇತರರು ಬಹುಸಂಖ್ಯೆಯಲ್ಲಿರುವ ಉದ್ಯಮಗಳಲ್ಲಿ ಕನ್ನಡಿಗರ ಸಂಖ್ಯೆಯನ್ನು ಹೆಚ್ಚಿಸುವ ಸಾಧ್ಯತೆ ಇರುವುದಿಲ್ಲ ಮತ್ತು ಅರ್ಹತೆಯಿರುವ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶದಲ್ಲಿ ಸರಿಸಮಾನವಾದ ಅವಕಾಶ ಕೊಟ್ಟಂತಾಗುವುದಿಲ್ಲ ಆದುದರಿಂದ ಈ ಪದ್ಧತಿಯನ್ನು ರದ್ದುಮಾಡಬೇಕು.

೨೭. ಉದ್ಯಮಗಳಲ್ಲಿರುವ ಸ್ಥಳೀಯ ನೌಕರರು ಬೇಸಾಯದ ಕೆಲಸ ಆರಂಭವಾದಾಗ ಇ.ಎಸ್.ಐ. ಸಂಸ್ಥೆಯು ಕೊಡುವ ವೈದ್ಯಕೀಯ ಸರ್ಟಿಫಿಕೇಟಿನ ಸೌಲಭ್ಯವನ್ನು ದುರುಪಯೋಗ ಪಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಗೈರುಹಾಜರಿಯಾಗುವುದರಿಂದ ಅವರ ನೇಮಕಕ್ಕೆ ಧಕ್ಕೆ ಉಂಟಾಗಿದೆ. ಇದನ್ನು ತಡೆಗಟ್ಟಲು ಇ.ಎಸ್.ಐ ಸಂಸ್ಥೆಯ ವೈದ್ಯಕೀಯ ಅಧಿಕಾರಿಗಳು ಮೆಡಿಕಲ್ ಸರ್ಟಿಫಿಕೇಟು ಕೊಡುವಾಗ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಾದ ನಿರ್ದೇಶನವನ್ನು ಕೊಡಬೇಕು.

೨೯. ಗುಲ್ಬರ್ಗಾ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಮೆಂಟ್ ಉದ್ಯಮಗಳು ಸ್ಥಾಪಿತವಾಗುತ್ತಲಿರುವುವು ಆದುದರಿಂದ ಇಲ್ಲಿ ಸಿಮೆಂಟ್ ಉದ್ಯಮಕ್ಕೆ ಸಂಬಂಧಪಟ್ಟ ತಾಂತ್ರಿಕ ವಿಷಯಗಳಲ್ಲಿ ತರಬೇತಿ ಕೊಡುವ ಏರ್ಪಾಟು ಉಳ್ಳ ಸಂಸ್ಥೆಯನ್ನು ತೆರೆಯಬೇಕು.

೩೦. ಅನ್ಸಿಲರಿ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡುವಾಗ ಕನ್ನಡಿಗರಿಗೆ ಪ್ರೋತ್ಸಾಹ ಕೊಡುವಂತೆ ಕ್ರಮ ತೆಗೆದುಕೊಳ್ಳಬೇಕು.

೩೩. ಸರಕಾರದಲ್ಲಿರುವ ಮುಖ್ಯವಾದ ಸ್ಥಾನಗಳಿಗೆ ಅಧಿಕಾರಿಗಳನ್ನು ನೇಮಿಸುವಾಗ ಕನ್ನಡಿಗರ ಬಗ್ಗೆ ಕಳಕಳಿಯಿರುವ ಅಥವಾ ಅದರ ಅಭಿವೃದ್ಧಿ ಬಗ್ಗೆ ಆಸಕ್ತಿ ವಹಿಸುವ ಮನೋಭಾವ ಇರುವ ಅಧಿಕಾರಿಗಳನ್ನು ಆಯ್ಕೆ ಮಾಡಿ ನೇಮಕ ಮಾಡಬೇಕು.

೪೧. ಪ್ರಾಥಮಿಕ ಮಟ್ಟದಲ್ಲಿಯೇ ಐಚ್ಛಿಕವಾಗಿ ವೃತ್ತಿ ತರಬೇತಿ ಪಡೆಯುವ ವ್ಯವಸ್ಥೆ ಮಾಡಬೇಕು.

೪೮. ಸರಕಾರವು ಕನ್ನಡಿಗರಿಗೆ ಶೇ ೮೦ರಷ್ಟು ಉದ್ಯೋಗಾವಕಾಶವನ್ನು ನಿಗದಿತ ಕಾಲಮಿತಿಯೊಳಗೆ ಸಾಧಿಸುವ ದೃಢ ಸಂಕಲ್ಪವನ್ನು ಮಾಡುವುದಲ್ಲದೆ ಈ ಬಗ್ಗೆ ಅನಾವಶ್ಯಕ ಪ್ರಚಾರವನ್ನು ಬಿಟ್ಟು, ಇದನ್ನು ಕೃತಿಯಲ್ಲಿಯೇ ತರಬೇಕು. ಈ ವಿಷಯದಲ್ಲಿ ಧೈರ್ಯಮಾಡಿ ಎಂಬ ಕಿವಿ ಮಾತನ್ನು ಸರಕಾರಕ್ಕೆ ತಿಳಿಸಲು ಸಮಿತಿ ಬಯಸುವುದು.



೫೦. ಕೇಂದ್ರ ಸರಕಾರದ ೮.೩.೮೪ರ ಅಧಿಕೃತ ಜ್ಞಾಪನ ಪತ್ರದಂತೆ ಕೇಂದ್ರ ಸರಕಾರಿ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿಯ ಪರಮಾವಧಿ ರೂ. ೧,೨೫೦ಕ್ಕಿಂತ ಹೆಚ್ಚು ಇರದ ಹುದ್ದೆಗಳಿಗೆ 'ನ್ಯಾಷನಲ್ ಎಂಪ್ಲಾಯ್‌ಮೆಂಟ್ ಸರ್ವೀಸ್' ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ವೇತನ ಶ್ರೇಣಿಯ ಮಿತಿಯನ್ನು ೧,೬೦೦ಕ್ಕೆ ಏರಿಸುವುದಲ್ಲದೆ ವೇತನ ಶ್ರೇಣಿ ಪರಿಷ್ಕರಣೆಯಾದಾಗಲೆಲ್ಲ ಈ ಮಿತಿಯನ್ನು ಪರಿಷ್ಕರಿಸುತ್ತಾ ಬರಬೇಕು.

೫೧. ಅರಣ್ಯದ ಹುಟ್ಟುವಳಿಯ ವಿಶೇಷತ: ಕಟ್ಟಿಗೆಯ ಮೇಲೆ ಅವಲಂಬಿಸಿದ ಉದ್ಯಮಗಳಿಗೆ ಅನುಕೂಲವಾಗುವಂತೆ ಅರಣ್ಯದ ಹುಟ್ಟುವಳಿಯ ಅಪವ್ಯಯವನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು.

೫೨. ರಾಜ್ಯದಲ್ಲಿ ಸ್ಥಾಪಿಸಬಹುದಾದ ಉದ್ಯಮಗಳನ್ನು ಗುರುತಿಸಿ ಅವುಗಳ ಬಗ್ಗೆ ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ತಯಾರಿಸಿ ಪ್ರಕಟಿಸುವ ವ್ಯವಸ್ಥೆ ಮಾಡಬೇಕು.

೫೪. ಇ.ಎಮ್.ಡಿ. ವಿನಾಯಿತಿ ಆದೇಶವನ್ನು ಹೊರಡಿಸುವಾಗ ಅದಕ್ಕೆ ಮೂರು ಅಥವಾ ಐದು ವರ್ಷಗಳ ಕಾಲದ ದೀರ್ಘಾವಧಿಯನ್ನು ಕೊಡುವಂತೆಯೂ, ಅದರ ನವೀಕರಣ ಆದೇಶವನ್ನು ಅವಧಿ ಅಂತ್ಯದೊಳಗೆ ಹೊರಡಿಸುವಂತೆಯೂ ಆದೇಶಿಸಬೇಕು.

೫೮. ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯ ವಿಷಯ ಪಟ್ಟಿಯಲ್ಲಿ ಅರಾಬಿಕ್, ಚೈನೀಸ್, ಫ್ರೆಂಚ್, ಜರ್ಮನ್, ಲ್ಯಾಟಿನ್, ಪಾಲಿ, ಪರ್ಶಿಯನ್, ರಷ್ಯನ್ ಸ್ಪಾನಿಷ್ ಈ ಅನಾವಶ್ಯಕ ವಿಷಯಗಳನ್ನು ತೆಗೆದುಹಾಕಬೇಕು.

# ಇಂದು ಈ ಸಲಹೆಗಳು ಅಪ್ರಸ್ತುತ ಅರ್ಥ ಕಳೆದುಕೊಂಡಿವೆ

೫. ಉದ್ಯಮಗಳಲ್ಲಿ ಅಪ್ರಂಟಿಸ್‌ಗಳನ್ನು ನೇಮಕ ಮಾಡುವಾಗ ಉದ್ಯೋಗ ವಿನಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಆದೇಶಗಳನ್ನು ಹೊರಡಿಸಬೇಕು.

೬. ದಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜನ್ (ಕಂಪಲ್ಸರಿ ನೋಟಿಫಿಕೇಷನ್ ಆಫ್ ವೇಕೆನ್ಸಿಸ್) ಆಕ್ಟ್ ೧೯೫೯–ಈ ಅಧಿನಿಯಮಕ್ಕೆ ಕೆಳಗೆ ನಮೂದಿಸಿದ ತಿದ್ದುಪಡಿ ಮಾಡುವ ವ್ಯವಸ್ಥೆ ಮಾಡಬೇಕು.

೧. ಅಧಿನಿಯಮದ ೪ನೇ ಅನುಚ್ಛೇದವನ್ನು ತಿದ್ದುಪಡಿ ಮಾಡಿ ಖಾಲಿ ಹುದ್ದೆಗಳನ್ನು ಅವಶ್ಯವಾಗಿ ಉದ್ಯೋಗ ವಿನಿಮಯ ಕೇಂದ್ರಗಳಿಗೆ ತಿಳಿಸಿದ ಮೇಲೆ ಅಲ್ಲಿ ಹೆಸರು ನೋಂದಾಯಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕ ಮಾಡುವುದು ಕಡ್ಡಾಯ ಮಾಡಬೇಕು ರಾಜ್ಯದ ಯಾವುದೇ ಕೇಂದ್ರದಲ್ಲಿ ಅರ್ಹತೆಯುಳ್ಳ ಅಭ್ಯರ್ಥಿಗಳು ದೊರೆಯದೆ ಇದ್ದಲ್ಲಿ ಮಾತ್ರ ಇತರ ಮೂಲಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಅವಕಾಶ ಇರಬೇಕು.

೨. ಅಕುಶಲ ಕೆಲಸಗಾರ ಹುದ್ದೆಗಳಿಗೂ ಅಧಿನಿಯಮ ಅನ್ವಯಿಸುವಂತೆ ಮಾಡಲು ಅನುಚ್ಛೇದ ೩(೧) (ಡಿ) ಯನ್ನು ತಿದ್ದುಪಡಿ ಮಾಡಬೇಕು.

೯. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸುವ ಮೊದಲು ಅಭ್ಯರ್ಥಿಗಳು ೧೫ ವರ್ಷಗಳ ಕಾಲ ರಾಜ್ಯದಲ್ಲಿ ವಾಸವಾಗಿದ್ದ ರೆಂಬುದನ್ನು ರುಜುವಾತುಪಡಿಸಲು ನೋಂದಣಿ ಅಧಿಕಾರಿಗಳು ಈ ಕೆಳಗಿನ ದಾಖಲೆಗಳನ್ನು ಪರಿಶೀಲಿಸಬೇಕು:

೧. ಶಾಲೆಯ ಸಟಿಫಿಕೇಟ್– (ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟ್) (ಪ್ರಾಥಮಿಕ ಸರ್ಟಿಫಿಕೇಟ್)

೨. ಪಡಿತರ ಚೀಟಿ (ರೇಷನ್ ಕಾರ್ಡ್)

೩. ಮತದಾರರ ಪಟ್ಟಿ (ಅದರಲ್ಲಿ ಅಭ್ಯರ್ಥಿಯ ಅಥವಾ ಅವರ ಹೆತ್ತವರ/ ಸಂರಕ್ಷಕರ ಹೆಸರು ಸೇರಿಸಬೇಕು)

೪. ಜನ್ಮ ದಾಖಲೆ (ಬರ್ಥ್ ಸರ್ಟಿಫಿಕೇಟ್)

ಅಭ್ಯರ್ಥಿಗಳ ಕನ್ನಡ ಭಾಷಾಜ್ಞಾನವನ್ನು ಹೆಸರು ನೋಂದಾಯಿಸುವ ಮೊದಲು ನೋಂದಣಿ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಪರೀಕ್ಷಿಸಬೇಕು.

೧೦. ಅನಕ್ಷರಸ್ಥರು ಹೆಸರು ನೋಂದಾಯಿಸಲು ಉದ್ಯೋಗ ವಿನಿಮಯ ಕೇಂದ್ರಗಳಿಗೆ ಬಂದಾಗ ಅವರು ವ್ಯವಹಾರಿಕ ಕನ್ನಡ ಭಾಷೆ ಮಾತನಾಡಲು ಶಕ್ತರಾಗಿದ್ದರೆ ಮತ್ತು ೧೫ ವರ್ಷಗಳ ಕಾಲ ರಾಜ್ಯದಲ್ಲಿ ವಾಸವಾಗಿದ್ದುದನ್ನು ರುಜುವಾತು ಪಡಿಸಿದರೆ ಅವರ ಹೆಸರನ್ನು ನೋಂದಾಯಿಸಬೇಕು.

೧೧. ಅಂಚೆ ಮೂಲಕ ಹೆಸರು ನೋಂದಾಯಿಸುವ ಪದ್ಧತಿಯಲ್ಲಿ ಅಭ್ಯರ್ಥಿಗಳ ಕನ್ನಡ ಭಾಷಾಜ್ಞಾನವನ್ನು ಪರೀಕ್ಷಿಸಲು ಅವಕಾಶವಿರುವುದಿಲ್ಲ ಆದುದರಿಂದ ಆ ಪದ್ಧತಿಯನ್ನು ರದ್ದು ಮಾಡಬೇಕು ಸ್ಪಷ್ಟ ಆಧಾರವಿದ್ದಲ್ಲಿ ಮಾತ್ರ ನೋಂದಾಯಿಸಬೇಕು.

೧೨. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಜಿಲ್ಲಾಕೇಂದ್ರಗಳಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಬಂದು ಹೆಸರು ನೋಂದಾಯಿಸಲು ಕಷ್ಟವಾಗಿರುವುದರಿಂದ ತಾಲ್ಲೂಕು ಮಟ್ಟದಲ್ಲಿ ಹೆಸರು ನೋಂದಾಯಿಸುವ ವ್ಯವಸ್ಥೆ ಮಾಡಿ ಆ ಹೆಸರುಗಳನ್ನು ಜಿಲ್ಲಾ ಕಛೇರಿಗಳಲ್ಲಿರುವ ರಿಜಿಸ್ಟರುಗಳಿಗೆ ಸೇರಿಸಬೇಕು.

೧೩. ಉದ್ಯೋಗ ವಿನಿಮಯ ಕೇಂದ್ರಗಳ ಅಧಿಕಾರ ವ್ಯಾಪ್ತಿ ಕ್ಷೀಣಿಸುವುದನ್ನು ತಡೆಗಟ್ಟಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕು.

೧. ರಾಜ್ಯ ಸರ್ಕಾರದ ಹಾಗೂ ಕೇಂದ್ರ

೨. ಸರಕಾರದ ಉದ್ಯಮಗಳಲ್ಲಿ ದಿನಗೂಲಿ ನೌಕರರನ್ನು ಸಾಂದರ್ಭಿಕ ಕೆಲಸಗಾರರನ್ನು ಹಾಗೂ ಅಪ್ರೆಂಟಿಸುಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡಿ ನೇಮಕ ಮಾಡಬೇಕು;

೩. ಕೇಂದ್ರ ಸರಕಾರಿ ಕಛೇರಿಗಳಲ್ಲಿರುವ 'ಡಿ' ಗುಂಪಿನ ಹುದ್ದೆಗಳಿಗೆ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕವೇ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಂತೆ ಕೇಂದ್ರ ಸರಕಾರವನ್ನು ಕೇಳಿಕೊಳ್ಳಬೇಕು.

೪. ರಾಜ್ಯ ಸರಕಾರಿ ವಲಯದ ಉದ್ಯಮಗಳು ಅಭ್ಯರ್ಥಿಗಳು ದೊರೆಯದೆ ಇದ್ದ ಪ್ರಸಂಗ ಬಿಟ್ಟು ಉಳಿದ ಕಡೆಗಳಲ್ಲಿ ಕಡ್ಡಾಯವಾಗಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಂತೆ ಆದೇಶಿಸಬೇಕು.

೫. ಸಿ.ಎನ್.ವಿ. ಅಧಿನಿಯಮ ಅನ್ವಯಿಸುವ ಖಾಸಗಿ ಉದ್ಯಮಗಳು ಇದೇ ಕ್ರಮವನ್ನು ಅನುಸರಿಸಬೇಕು.

ಉದ್ಯೋಗ ವಿನಿಮಯ ಕೇಂದ್ರಗಳ ಅಧಿಕಾರಿಗಳು ತಮ್ಮ ಈಗಿನ ಜಡ ಮತ್ತು ಉದಾಸೀನ ತುಂಬಿದ ನಿಷ್ಕ್ರಿಯ ಪಾತ್ರವನ್ನು ತೊರೆದು ಸಮಸ್ಯೆ ಪರಿಹಾರದ ಬಗ್ಗೆ ಕರ್ತೃತ್ವ ಶಕ್ತಿಯಿಂದ ಕೆಲಸ ಮಾಡಬೇಕು. ಈ ಕೇಂದ್ರಗಳ ಮೂಲಕ ಉದ್ಯೋಗ ಪಡೆದ ಅಭ್ಯರ್ಥಿಗಳ ಸಂಖ್ಯೆಯೇ ಅಲ್ಲಿನ ಅಧಿಕಾರಿಗಳ ದಕ್ಷತೆಯ ಅಳತೆಗೋಲಾಗಿರಬೇಕು.

೧೫. ರಾಜ್ಯದಲ್ಲಿರುವ ಎರಡು ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಮಂಡಳಿಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಭಾಷಾಜ್ಞಾನವನ್ನು ಕುರಿತು ಒಂದು ಪ್ರಶ್ನೆ ಪ್ರತಿಕೆಯನ್ನು ಸೇರಿಸುವಂತೆ ಸಲಹೆ ನೀಡಬೇಕು.

೧೬. ಈ ಮಂಡಳಿಗಳು ಅರ್ಜಿಗಳನ್ನು ಆಹ್ವಾನಿಸುವ ಜಾಹೀರಾತುಗಳಲ್ಲಿ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನ ಅವಶ್ಯವೆಂಬುದಾಗಿ ಸೂಚಿಸಬೇಕು.



೧೮. ರಾಜ್ಯದಲ್ಲಿ ಬ್ಯಾಂಕುಗಳ ನೇಮಕಾತಿ ಮಂಡಳಿಗಳನ್ನು ರಚಿಸುವಾಗ ಕೇಂದ್ರ ಸರಕಾರವು ರಾಜ್ಯ ಸರಕಾರವನ್ನು ಸಂಪರ್ಕಿಸುವಂತೆಯೂ ಮತ್ತು ಈ ಮಂಡಳಿಗಳ ಸದಸ್ಯರುಗಳಲ್ಲಿ ರಾಜ್ಯ ಸರಕಾರದ ಪ್ರತಿನಿಧಿಯನ್ನು ಸೇರಿಸಿ ಬಹು ಸಂಖ್ಯೆಯಲ್ಲಿ ಕನ್ನಡಿಗರನ್ನು ಸೇರಿಸುವಂತೆ ಕೇಂದ್ರ ಸರಕಾರವನ್ನು ರಾಜ್ಯ ಸರಕಾರವು ಒತ್ತಾಯಿಸಬೇಕು.

೧೯. ಕೆಲವು ಕೇಂದ್ರ ಸರಕಾರಿ ಇಲಾಖೆಗಳು ದೈಹಿಕಶ್ರಮದ ಹಾಗೂ ದಿನಗೂಲಿ ಕೆಲಸಗಳಿಗೆ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸಂಪರ್ಕಿಸದೆ ಕನ್ನಡೇತರರನ್ನು ನೇರವಾಗಿ ನೇಮಕ ಮಾಡಿ ಕೆಲವು ತಿಂಗಳ ನಂತರ ಅವರ ಸೇವೆಯನ್ನು ಖಾಯಂ ಗೊಳಿಸುವರು. ಇಂತಹ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಆಯ್ಕೆ ಮಾಡುವಂತೆ ಒತ್ತಾಯಿಸಬೇಕು.

೨೧. ರಾಜ್ಯದಲ್ಲಿರುವ ಕೆಲವು ತಾಂತ್ರಿಕ ಮತ್ತು ಇತರ ತರಬೇತಿ ಕೇಂದ್ರಗಳಲ್ಲಿ ಪ್ರವೇಶ ಕೊಡುವಾಗ ಪರಪ್ರಾಂತ್ಯದ ಅಭ್ಯರ್ಥಿಗಳಿಗೆ ಆದ್ಯತೆ ಕೊಡುತ್ತಿರುವುದು ಮತ್ತು ಅದರಿಂದ ಅವರಿಗೆ ಉದ್ಯೋಗಾವಕಾಶ ದೊರೆತು ಕನ್ನಡಿಗರ ಉದ್ಯೋಗಾವಕಾಶಕ್ಕೆ ಧಕ್ಕೆ ಉಂಟಾಗುತ್ತಿರುವುದು ಸಮಿತಿ ಗಮನಕ್ಕೆ ಬಂದಿದೆ. ಆದುದರಿಂದ ಈ ತರಬೇತಿ ಕೇಂದ್ರಗಳಲ್ಲಿ ಪ್ರವೇಶ ಕನ್ನಡಿಗರಿಗೆ ಮಾತ್ರ ಸೀಮಿತಗೊಳಿಸಬೇಕು. ಅನಿವಾರ್ಯ ಪ್ರಸಂಗಗಳಲ್ಲಿ ಪರಪ್ರಾಂತ್ಯದವರಿಗೆ ಪ್ರವೇಶ ಕೊಟ್ಟರೂ ಅದು ನೂರಕ್ಕೆ ೫ಕ್ಕಿಂತ ಹೆಚ್ಚಿರಬಾರದು.

೩೧. ಉದ್ಯಮಗಳ ಸ್ಥಾಪನೆ ಮತ್ತು ವಿಸ್ತರಣೆ ಪ್ರಸ್ತಾಪ ಬಂದಾಗ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯೂ ಮತ್ತು ಉದ್ಯಮಗಳಿಗೆ ಆರ್ಥಿಕ ನೆರವನ್ನು ಒದಗಿಸಿದಾಗ ಕರ್ನಾಟಕ ರಾಜ್ಯ ಆರ್ಥಿಕ ನಿಗಮವೂ ಉದ್ಯೋಗ ವಿನಿಮಯ ಕೇಂದ್ರಗಳಿಗೆ ತಿಳಿಸಬೇಕು. ಈ ಕೇಂದ್ರಗಳು ತಮ್ಮಲ್ಲಿ ಹೆಸರು ನೊಂದಾಯಿಸಿದ ಅಭ್ಯರ್ಥಿಗಳ ನೇಮಕಕ್ಕೆ ಪ್ರಯತ್ನಿಸಬೇಕು.

೩೨. ಕನ್ನಡಿಗರ ನಾನ್-ರೆಸಿಡೆಂಟ್ ಆಕೌಂಟಿನಲ್ಲಿರುವ ಠೇವಣಿಯನ್ನು ಕನ್ನಡಿಗರಿಗೆ ನೇಮಕ ಮಾಡಬೇಕೆಂಬ ಷರತ್ತಿನ ಮೇಲೆ ಉದ್ಯಮಗಳ

ಸ್ಥಾಪನೆಗಾಗಿ ಉಪಯೋಗಿಸಲು ಒಪ್ಪಿಗೆ ಕೊಡುವಂತೆ ರಾಜ್ಯ ಸರಕಾರವು ಕೇಂದ್ರ ಸರಕಾರಕ್ಕೆ ಶಿಫರಸು ಮಾಡಬೇಕು.

೪೨. ಕೈಗಾರಿಕಾ ವಸಾಹತುಗಳು ಹಾಗೂ ದೊಡ್ಡ ಪ್ರಮಾಣದ ಉದ್ಯಮಗಳು ಸ್ಥಾಪನೆಯಾಗುವ ಪ್ರದೇಶಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯುವ ಅವಕಾಶ ಮಾಡಲು ಅಲ್ಲಿ ವೃತ್ತಿ ತರಬೇತಿ ಕೇಂದ್ರ ಹಾಗೂ ಉದ್ಯೋಗ ವಿನಿಮಯ ಕೇಂದ್ರಗಳನ್ನು ತೆರೆಯುವ ವ್ಯವಸ್ಥೆ ಮಾಡಬೇಕು.